ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಜನವರಿ -೨೦೧೬ ಸಂಚಿಕೆ - ೬

ಪ್ಯಾರಿಸ್ ಒಪ್ಪಂದ ಮತ್ತು ನಾವು

*

ಭಾರತೀಯ ಶಾಲೆಗಳು ವಿದ್ಯಾರ್ಥಿಗಳನ್ನು ವಿಫಲಗೊಳಿಸುತ್ತಿವೆ

*

ಮದ್ಯಪಾನ ನಿಷೇಧ ಒಂದು ಸವಾಲೇ?

*

ವಿಶ್ವವ್ಯವಸ್ಥೆಯ ಮೂಲಸೂತ್ರ

– ಗೀತೆ

ಜನಪದ ವಿಚಾರದಲ್ಲಿ

ಜನವರಿ– ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ – ೨೦೧೬
ಸಂಪುಟ – ೧೬
ಸಂಚಿಕೆ – ೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ – 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 – 299854
email :
janapada@yahoo.com
Web: janapada.org

ದು ಗ್ಗಾ ಣಿ

ದುಗ್ಗಾಣಿ ಎಂಬುದು ದುರ್ಜನ ಸಂಗ
ದುಗ್ಗಾಣಿ ಬಲು ಕೆಟ್ಟದಣ್ಣ.
ಆಚಾರ ಹೇಳೋದು
ದುಗ್ಗಾಣಿ
ಬಹು ನೀಚರ ಮಾಡೋದು
ದುಗ್ಗಾಣಿ
ನಾಚಿಕೆಯಿಲ್ಲದೆ
ಮನೆ ಮನೆ ತಿರುಗಿಸಿ ಛೀ ಛೀ
ಎನಿಸೋದು
ದುಗ್ಗಾಣಿಯಣ್ಣ
ನೆಂಟತನ ಹೇಳೋದೂ
ದುಗ್ಗಾಣಿ
ಬಹು ನೆಂಟರ ನೋಲಿಸೋದು
ದುಗ್ಗಾಣಿ
ಒಂಟೆ ಹಾಂಗೆ ಮೋರೆ ಮೇಲಕ್ಕೆ
ಸೆಳಕೊಂಡು; ಕುಂಟನೆನಿಸುವುದು
ದುಗ್ಗಾಣಿಯಣ್ಣ
ಮಾನವನಾಗಿರಿಸೋದು
ದುಗ್ಗಾಣಿ
ಮಾನ ಹಸಗೇಡಿಸೋದು
ದುಗ್ಗಾಣಿ
ಬಹು ಮಾನ ನಿಧಿ ಶ್ರೀ ಪುರಂದರ
ವಿಠಲನ
ಕಾಣಿಸದಿರುವುದು
ದುಗ್ಗಾಣಿಯಣ್ಣ

– ಶ್ರೀ ಪುರಂದರ ದಾಸರು

(ಹಳ್ಳಿಯಿಂದ ದಿಲ್ಲಿಯವರೆಗೆ ವ್ಯಾಪಿಸಿರುವ ಭ್ರಷ್ಟಾಚಾರವನ್ನು ನೆನೆದು ಪ್ರಕಟ)

ಚಿಂತನೆಗೊಂದು ಸಂಗತಿ

ಇತ್ತೀಚೆಗೆ ಎಲೆಕ್ಟ್ರಾನಿಕ್ಸ್ ಉಪಕರಣಗಳ ಉಪಯೋಗ ಬೆಳೆಯುತ್ತಲೇ ಇದೆ. ಮೊಬೈಲ್ ಫೋನ್‌ಗಳು ಮಿಲಿಯಗಟ್ಟಲೆ ಉಪಯೋಗದಲ್ಲಿವೆ. ಮಿಕ್ಸಿ, ರೆಫ್ರಿಜರೇಟರ್, ಟಿ.ವಿ, ರೇಡಿಯೋ, ಕಂಪ್ಯೂಟರ್ ಮುಂತಾದವುಗಳು ಇಲ್ಲದ ಮನೆಗಳಿಲ್ಲ. ಶಾಲಾ ಕಾಲೇಜುಗಳಲ್ಲಿಯೂ ಇವೆ. ಇವುಗಳಲ್ಲದೆ ಮಕ್ಕಳು ಖರೀದಿಸುವ ಆಟಿಕೆಗಳಿವೆ. ಇವು ಕೆಟ್ಟರೆ ಇವನ್ನು ಸುಸ್ಥಿತಿಗೆ ತರಲು ಪರದಾಡಬೇಕಾಗುತ್ತದೆ. ಇವುಗಳನ್ನು ರಿಪೇರಿಮಾಡಿಸುವ ಬದಲು ಹೊಸದಾದ ಉಪಕರಣವನ್ನೇ ಖರೀದಿಸುವುದು ಹೆಚ್ಚು ಲಾಭಕರ ಮತ್ತು ಸುಲಭವೆಂದೆನಿಸುತ್ತದೆ. ಆಗ ಕೆಟ್ಟು ಹೋದ ಪದಾರ್ಥಗಳು ಮನೆಯ ಮೂಲೆ ಸೇರುತ್ತವೆ. ಅವುಗಳನ್ನು ಇಡಲು ಸ್ಥಳ ಸಾಕಾಗುವುದಿಲ್ಲ, ಅವುಗಳನ್ನು ಎಸೆಯಲು ಮನಸ್ಸು ಬರುವುದಿಲ್ಲ, ಸುಸ್ಥಿತಿಗೆ ತರಲು ಸಾಧ್ಯವಿಲ್ಲ. ಎಸೆಯುವುದಾದರೆ ಎಲ್ಲಿ ಎಸೆಯಬೇಕು ಎಂಬ ಪ್ರಶ್ನೆ ಬರುತ್ತದೆ. ಎಸೆಯಲ್ಪಟ್ಟರೆ ಅವು ಮಣ್ಣಿನೊಂದಿಗೆ ಮಣ್ಣಾಗದೆ ಹಾಗೇ ಉಳಿಯುತ್ತವೆ. ಪರಿಸರವನ್ನು ಹಾಳುಮಾಡುತ್ತವೆ. ಇಂತಹ ತ್ಯಾಜ್ಯ e-ತ್ಯಾಜ್ಯ ಎಂದು ಕರೆಯಲ್ಪಡುತ್ತದೆ. ಪ್ರತಿವರ್ಷ e–ತ್ಯಾಜ್ಯ ಹೆಚ್ಚಾಗುತ್ತಲೇ ಇದೆ. ಕಳೆದವರ್ಷ ಒಂದು ಅಂದಾಜಿನ ಪ್ರಕಾರ ೬೨ ಬಿಲಿಯನ್ ಪೌಂಡ್‌ಗಳ ಬೆಲೆಯಷ್ಟು e – ತ್ಯಾಜ್ಯ ಎಸೆಯಲ್ಪಟ್ಟಿತು. ಕೆಟ್ಟ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಖರೀದಿಸಿ ಅವುಗಳನ್ನು ಮರುಬಳಕೆ ಮಾಡುವ ಪ್ರಯತ್ನದ ಅಂಗವಾಗಿ ಕೆಲವು ಕಂಪನಿಗಳು ಪ್ರಯತ್ನಮಾಡುತ್ತಿವೆಯಾದರೂ ಈ ಸಮಸ್ಯೆ ಉಳಿದುಕೊಂಡೆ ಬಂದಿದೆ. ಭಾರತದಲ್ಲಿ ಇದು ಇನ್ನೂ ಹೆಚ್ಚಾಗಿ ನಡೆಯುತ್ತಿಲ್ಲ. ಹೊಸ ಎಲೆಕ್ಟ್ರಾನಿಕ್ ಉಪಕರಣಗಳು ಮನೆಗಳಲ್ಲಿ ಪ್ರವೇಶಿಸಲು ಮುಖ್ಯ ಕಾರಣ ಮನೆಗೆಲಸವನ್ನು ಸುಲಭಮಾಡಿಕೊಳ್ಳಬೇಕು ಎಂಬ ಮನೋಭಾವದ ಜೊತೆಗೆ ಶರೀರ ಶ್ರಮದ ಬಗ್ಗೆ ಇರುವ ತಾತ್ಸಾರ. ಈ ಕಾರಣಗಳೊಂದಿಗೆ ಸಮಯ ಉಳಿಸಿಕೊಳ್ಳಬೇಕೆಂಬ ಆಕಾಂಕ್ಷೆ. ಆದರೆ ಶ್ರಮ ಉಳಿಸಿ, ಸಮಯ ಉಳಿಸಿ ಯಾವ ಉತ್ಪಾದಕ ಮತ್ತು ಫಲಪ್ರದಾಯಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಎಂಬ ಸಂಗತಿ ನಿಗೂಢವಾಗಿಯೇ ಉಳಿಯುತ್ತದೆ. ಮನೆಗೆಲಸದಲ್ಲಿ ಶ್ರಮ ಮತ್ತು ಸಮಯ ಉಳಿಸಿಕೊಂಡವರ ಆರೋಗ್ಯ ಉತ್ತಮವಾಗಿರುತ್ತದೆಂದು ಹೇಳಲು ಬರುವುದಿಲ್ಲ. ಸ್ಥೂಲ ಶರೀರ ಉಳ್ಳವರಾಗಿಯೂ, ಮನಕ್ಲೇಷ ಉಳ್ಳವರಾಗಿಯೂ ಇರುವುದು ಕಂಡು ಬರುವುದು ಸಾಮಾನ್ಯವಾಗಿದೆ. ಆಧುನಿಕ ಉಪಕರಣಗಳನ್ನು ಎಷ್ಟು ಅಗತ್ಯವೊ ಅಷ್ಟು ಮಾತ್ರ ಉಪಯೋಗಿಸಿಕೊಳ್ಳಬೇಕು. ಎಲ್ಲಿ ಶರೀರ ಶ್ರಮವನ್ನು ಉಪಯೋಗಿಸಿಕೊಳ್ಳಲು ಅವಕಾಶ ಇದೆಯೊ ಅಲ್ಲಿ ಉಪಕರಣಗಳನ್ನು ಉಪಯೋಗಿಸಿಕೊಳ್ಳಬಾರದೆಂಬ ವಿಚಾರ ಎಲ್ಲರಲ್ಲೂ ಮೂಡಬೇಕು. ಯಂತ್ರ ನಾಗರೀಕತೆಯೆಂದರೆ ಯಂತ್ರದ ಮೇಲೆ ಮನುಷ್ಯನ ಹಿಡಿತವೇ ಹೊರತು. ಯಂತ್ರದ ಕೈಯಲ್ಲಿ ಮನುಷ್ಯನ ಹಿಡಿತವಲ್ಲ. ಇದು ಸದಾ ಚಿಂತನೆಗೊಂದು ಜ್ವಲಂತ ಸಂಗತಿ.

ಪ್ಯಾರಿಸ್ ಒಪ್ಪಂದ ಮತ್ತು ನಾವು

– ಸುರೇಂದ್ರ ಕೌಲಗಿ

ಬಹು ಇತ್ತೀಚೆಗೆ ಪ್ಯಾರಿಸಿನಲ್ಲಿ ೧೯೫ ರಾಷ್ಟ್ರಗಳ ಮುಖಂಡರು ಸೇರಿ ಮಾನವ ಕುಲವನ್ನು ಭೀತಿಗೊಳಿಸುತ್ತಿರುವಂಥ ಜಾಗತಿಕ ತಾಪಮಾನವನ್ನು ಹಿಂದಕ್ಕಟ್ಟಿ ಶಕ್ತಿ ಮೂಲಗಳಲ್ಲಿ ಕ್ರಾಂತಿಯನ್ನು ತರುವ ಉದ್ದೇಶದಿಂದ ಮಾಡಿಕೊಂಡ ಒಪ್ಪಂದವನ್ನು ಜಗತ್ತಿನ ಜನರೆಲ್ಲ ಸ್ವಾಗತಿಸಬೇಕು. ಸರ್ಕಾರಗಳು ವಿಶ್ವ ತಾಪಮಾನವನ್ನು ೨ ಡಿಗ್ರಿ ಸೆಲ್ಷಿಯಸ್ ಮಟ್ಟಕ್ಕೆ ಸ್ಥಿರವಾಗಿಸಬೇಕು ಮತ್ತು ಸಾಧ್ಯವಾದರೆ ಅದನ್ನು ೧.೫೨ ಡಿಗ್ರಿ ಸೆಲ್ಷಿಯಸ್‌ಗೆ ಇಳಿಸಬೇಕು ಎಂದು ಮಾಡಿಕೊಂಡಿರುವ ಒಪ್ಪಂದ ಜಗತ್ತನ್ನು ವಿನಾಶದಿಂದ ಉಳಿಸುವತ್ತ ಬಹು ನಿರ್ಣಾಯಕ ಸಂಕಲ್ಪವಾಗಿದೆ. ೧೮ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಮುನ್ನ ಯಾವ ಪ್ರಮಾಣದಲ್ಲಿ ಹವಾಮಾನ ತಾಪದ ಪ್ರಮಾಣವಿತ್ತೊ ಆ ಪ್ರಮಾಣಕ್ಕೆ ಈಗಿನ ತಾಪಮಾನ ಇಳಿದರೆ ಜಗತ್ತು ಅತ್ಯಂತ ಕ್ಷೇಮಕರವಾಗಿ ಇರುವುದೆಂಬ ಅಭಿಪ್ರಾಯ ಪ್ಯಾರಿಸ್ ಸಮ್ಮೇಳನದಲ್ಲಿ ಮೂಡಿತ್ತೆಂಬುದು ಪರಿಸರ ಪ್ರೇಮಿಗಳಿಗೆಲ್ಲ ಸಂತೋಷದ ಸಂಗತಿಯೇ ಆಗಿದೆ. ಅಲ್ಲದೆ ೨೧೦೦ ರ ವೇಳೆಗೆ ವಿಷಾನಿಲಗಳ ಸೂಸುವಿಕೆ ೦ ಡಿಗ್ರಿ ಸೆಲ್ಷಿಯಸ್‌ಗೆ ಇಳಿಯಬೇಕೆಂಬ ದೂರದೃಷ್ಟಿಯ ಗುರಿಯನ್ನು ಮುಟ್ಟಲು ಎಲ್ಲವೂ ಪಾರದರ್ಶಕವಾಗಿರಬೇಕೆಂಬ ಮಾತು ಬಂದುದು ಸಹ ಚೇತೋಹಾರಿಯಾಗಿದೆ. ಈ ಮಾತುಗಳು ಪ್ಯಾರಿಸ್ ಒಪ್ಪಂದದ ಸಕಾರಾತ್ಮಕ ಫಲಶೃತಿಯಾಗಿವೆ. ಜಾಗತಿಕ ತಾಪಮಾನ ಹೆಚ್ಚಾಗಲು ಮುಖ್ಯ ಕಾರಣವಾದ ಐತಿಹಾಸಿಕ ಕಾರಣಗಳ ಬಗ್ಗೆ ಚಿಂತನೆ ನಡೆಯದೆ ಇದ್ದುದರಿಂದ ಕೈಗಾರಿಕೆಯಲ್ಲಿ ಮುಂದುವರೆದು ಶ್ರೀಮಂತವಾಗಿರುವ ರಾಷ್ಟ್ರಗಳನ್ನು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ಯಾರಿಸ್ ಒಪ್ಪಂದ ಸಹಾಯ ಮಾಡಿದೆ ಎಂಬುದು ಮತ್ತು ಆಧುನಿಕ ಅಭಿವೃದ್ಧಿ ಯೋಜನೆಗಳು ಕಾರಣ ಎಂಬುದು ಚರ್ಚೆಯ ಮುನ್ನಲೆಗೆ ಬರದೇ ಇದ್ದುದು ನಕಾರಾತ್ಮಕ ವಿಷಯವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಹವಾಮಾನ ತಾಪಕ್ಕೆ ಮತ್ತು ಪರಿಸರ ನಾಶಕ್ಕೆ ಕಾರಣವಾಗಿವೆ ಎಂಬುದರ ಬಗ್ಗೆ ಗಂಭೀರ ಚರ್ಚೆ ನಡೆಯದೆ ಇದ್ದುದು ಹಾಗೂ ಅವುಗಳ ನಿಯಂತ್ರಿತ ಬೆಳವಣಿಗೆಯ ಸಾಧ್ಯಸಾಧ್ಯತೆಯ ಬಗ್ಗೆ ಯೋಚಿಸದೇ ಇದ್ದುದು ಕೂಡ ಪ್ಯಾರಿಸ್ ಸಮ್ಮೇಳನದ ನಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ಹೇಳಬಹುದು. ಈ ರೀತಿ ಎರಡು ಪ್ರಕಾರದ ಫಲಶೃತಿಗಳು ದೊರೆತಿದ್ದರೂ ಒಟ್ಟಾರೆ ಪ್ಯಾರಿಸ್ ಒಪ್ಪಂದ ಸ್ವಾಗತಾರ್ಹವಾಗಿದೆ. ಇರುವ ಒಂದೇ ಭೂಮಿ ವಿನಾಶದ

ಅಂಚಿಗೆ ಹೋಗುತ್ತಿರುವ ಸಮಯದಲ್ಲಾದರೂ ಅದನ್ನು ಉಳಿಸಿಕೊಳ್ಳಬೇಕೆಂಬ ಎಚ್ಚರ ಜಗತ್ತಿನ ರಾಷ್ಟ್ರಗಳ ನಾಯಕರಿಗೆ ಬಂದದ್ದು ಕಾರ್ಮೋಡದ ಮುಗಿಲಿಗೆ ಬೆಳ್ಳಿಯ ಅಂಚು ಮೂಡಿದಂತಾಗಿದೆ. ೫೦ ವರ್ಷಗಳ ಹಿಂದೆಯೇ ಜಾಗತಿಕ ತಾಪಮಾನದ ಬಗ್ಗೆ ಮೊದಲ ಎಚ್ಚರಿಕೆಯನ್ನು ಜಗತ್ತಿನ ಶ್ರೀಮಂತ ದೇಶವಾದ ಅಮೇರಿಕಾದ ಅಧ್ಯಕ್ಷ ಒಬಾಮಾ ಅವರಿಗೆ ಕೊಡಲಾಗಿತ್ತು. ಆದರೆ ಅದನ್ನು ಮರೆಯಲಾಯಿತು. ಈಗ ಬದಲಾಗುತ್ತಿರುವ ರಾಜಕೀಯ ಸನ್ನಿವೇಶ ಆ ಎಚ್ಚರಿಕೆಗೆ ಕೊನೆಗೂ ಗಮನ ಕೊಡುವಂತಾಗಿದೆ. ಅಮೇರಿಕಾದ ಪ್ರಮುಖ ಹವಾಮಾನ ತಜ್ಞರಾದ ಕ್ರಿಸ್ಟೋಫರ್ ಬಿ.ಫೀಲ್ಡ್ ಪ್ಯಾರಿಸ್ ಒಪ್ಪಂದ ಜಗತ್ತನ್ನೇ ಬದಲಾಯಿಸಬಹುದು ಎಂದು ಹೇಳಿದ್ದಾರೆ. ಸಮಸ್ಯೆ ಬಗೆಹರಿಯದೇ ಹೋದರೂ ಪರಿಹಾರದ ಅಡಿಪಾಯವಂತೂ ಹಾಕಲಾಗಿದೆಯೆಂದು ಹೇಳಿದ್ದಾರೆ. ಪ್ಯಾರಿಸ್ ಒಪ್ಪಂದವನ್ನು ಪ್ರಾಮಾಣಿಕವಾಗಿ ಜಾರಿಗೆ ತರಲು ಪ್ರಯತ್ನಿಸಿದಲ್ಲಿ ಅಪಾಯದ ಅನಿಲಗಳ ಹೊರಸೂಸುವಿಕೆ ಬಹಳಷ್ಟು ತಗ್ಗುವುದು. ಅದು ಧ್ರುವ ಪ್ರದೇಶಗಳಲ್ಲಿಯ ಹಿಮಾಚ್ಛಾದನೆಯನ್ನು ಕಡಿಮೆಮಾಡಿ ಸಮುದ್ರದ ಮಟ್ಟ ೨೦ ಅಡಿ ಅಥವಾ ಹೆಚ್ಚು ಏರುವುದನ್ನು ತಡೆಯುವುದರ ಮೂಲಕ ೭ಬಿಲಿಯನ್ ಮಾನವರನ್ನು ವಿವಿಧ ಪ್ರಾಕೃತಿಕ ವಿಕೋಪಗಳಿಂದ ಸಂರಕ್ಷಿಸಲು ಸಾಧ್ಯವೆಂದು ಹೇಳಿದ್ದಾರೆ ಮತ್ತು ೨೮೦ ಮಿಲಿಯ ಜನರು ನೀರಿನಲ್ಲಿ ಮುಳುಗುವುದು ತಪ್ಪುತ್ತದೆಂದು ಹೇಳಿದ್ದಾರೆ. ೨೦೧೫ನೇ ಇಸವಿ ಅತ್ಯಂತ ಉಷ್ಣತೆಯುಳ್ಳ ವರ್ಷವಾಗುವುದೆಂದು ಎಲ್ಲ ವಿಜ್ಞಾನಿಗಳು ಹೇಳುತ್ತಿರುವ ಸಂದರ್ಭದಲ್ಲಿ ಪ್ಯಾರಿಸ್ ಒಪ್ಪಂದ ಎಷ್ಟೇ ದುರ್ಬಲ ಮತ್ತು ಪೊಳ್ಳು ಮಾತುಗಳಿಂದ ಕೂಡಿದ್ದಾಗಿರುವುದೆಂದು ಅನಿಸಿದರೂ ಜಗತ್ತನ್ನು ಭೀಕರ ಪರಿಸರಾತ್ಮಕ ಪರಿಣಾಮಗಳಿಂದ ರಕ್ಷಿಸುವತ್ತ ಪ್ರಮುಖ ಹೆಜ್ಜೆಯಾಗಿದೆ ಎಂದು ನಾವು ತಿಳಿಯಲೇಬೇಕು. ಪ್ಯಾರಿಸ್ ಒಪ್ಪಂದದ ರೂಪರೇಷೆಗಳು ತಯಾರಿಸುವುದರಲ್ಲಿ ಗ್ರೀನ್ ಪೀಸ್, ಆವಾಜ಼ ಮುಂತಾದ ಪರಿಸರವಾದಿ ಸಂಸ್ಥೆಗಳು ಬಹುಮಟ್ಟಿಗೆ ವಿಶೇಷ ಪಾತ್ರವನ್ನುವಹಿಸಿವೆ. ಅವು ಜನಸಾಮಾನ್ಯರ ಪ್ರತಿನಿಧಿಗಳಾಗಿ ಪ್ಯಾರಿಸ್ ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾತ್ರವಹಿಸಿವೆ. ಅದಕ್ಕಾಗಿ ಜನಸಾಮಾನ್ಯರಾದ ನಾವು ಪರಿಸರವಾದಿ ಸಂಸ್ಥೆಗಳನ್ನು ಅಭಿನಂದಿಸಲೇಬೇಕು. ಜಾಗತಿಕ ತಾಪಮಾನ ಏರುವುದನ್ನು ಕಡಿಮೆಮಾಡುವ ಮತ್ತು ಎಲ್ಲ ಬಗೆಯ ಪರಿಸರ ವಿನಾಶವನ್ನು ತಡೆಯುವ ದೊಡ್ಡ ಹೊಣೆಗಾರಿಕೆ ಜನಸಾಮಾನ್ಯರಾದ ನಮ್ಮ ಮೇಲೆಯೇ ಇದೆ. ತಾಪಮಾನದ ಏರಿಕೆಗೆ ಮತ್ತು ಪರಿಸರದ ವಿನಾಶಕ್ಕೆ ಆಧುನಿಕ ಅಭಿವೃದ್ಧಿ ಮೋಹ ದೊಡ್ಡ ಕಾರಣವಾಗಿದೆಯೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಿದೆ. ಮತ್ತು ಅದರಿಂದಾಗಿ ಜಗತ್ತು ವಿನಾಶದ ಅಂಚಿನಲ್ಲಿ ಬಂದಿದ್ದರೆ ನಮ್ಮ ಜೀವನದ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆ ಇದೆ. ತಾಪಮಾನ ಇಳಿಸುವಲ್ಲಿ ಮತ್ತು ಪರಿಸರ ರಕ್ಷಣೆಯಲ್ಲಿ ಜನಸಾಮಾನ್ಯರ ಪಾತ್ರ ಎಷ್ಟು ಮಹತ್ವದ್ದಾಗಿದೆ

ಎಂಬುದನ್ನು ಎತ್ತಿಹಿಡಿಯುವ ಪ್ರಯತ್ನವನ್ನು ಪ್ಯಾರಿಸ್ ಒಪ್ಪಂದ ಏಕೆ ಮಾಡಲಿಲ್ಲ ಎಂಬ ಸಂಗತಿ ಆಶ್ಚರ್ಯಕರವಾಗಿದೆ. ಜನಸಾಮಾನ್ಯರ ಪಾತ್ರದ ಪ್ರಾಮುಖ್ಯತೆಯನ್ನು ಅದು ಎತ್ತಿ ತೋರಿಸಿದ್ದರೆ ಅದೊಂದು ಜಾಗತಿಕ ಮಟ್ಟದ ಪರಿಸರ ಕ್ರಾಂತಿಗೆ ಕಾರಣವಾಗುತ್ತಿತ್ತು. ಶ್ರೀಸಾಮಾನ್ಯನನ್ನು ಮರೆತು ಪರಿಸರ ರಕ್ಷಣೆಯ ಯಾವ ಕಾರ್ಯಕ್ರಮವು ಸಫಲವಾಗಲಾರದು. ಜಾಗತಿಕ ತಾಪಮಾನದ ಏರಿಕೆಗೆ ಮತ್ತು ಪರಿಸರದ ವಿನಾಶಕ್ಕೆ ಶ್ರೀ ಸಾಮಾನ್ಯ ಎಷ್ಟೊಂದು ಕಾರಣವಾಗಿದ್ದಾನೆ ಎಂಬುದನ್ನು ಅವನಿಗೆ ತಿಳಿಸುವ ಮಹತ್ತಾದ ಕೆಲಸವನ್ನು ಸ್ವತಃ ಸರ್ಕಾರಗಳು ಮಾಡಬೇಕಿದೆ. ಅಭಿವೃದ್ಧಿಯ ಕಾರಣದಿಂದಾಗಿ ಎಲ್ಲ ಬಗೆಯ ಸಮಸ್ಯೆಗಳು ಉಂಟಾಗಿರುವಾಗ ಅಭಿವೃದ್ಧಿಯನ್ನು ಕುರಿತೆ ಸರ್ಕಾರಗಳು ಮತ್ತು ನಾವು ಪುನರ್‌ವಿಮರ್ಶೆ ಮಾಡಬೇಕಾಗಿದೆ. ಈಗ ನಾವು ಮತ್ತು ಸರ್ಕಾರ ಒಟ್ಟುಗೂಡಿಯೇ ಪ್ರಕೃತಿಯ ವಿನಾಶ ಮಾಡುತ್ತಿದ್ದೇವೆ. ಚಪ್ಪಾಳೆಗೆ ಎರಡೂ ಕೈಗಳು ಬೇಕಾಗುವಂತೆ ಅಭಿವೃದ್ಧಿಗೂ ನಾವು ಮತ್ತು ಸರ್ಕಾರ ಕಾರಣ. ಜಗತ್ತಿನಲ್ಲಿ ಪ್ರತಿಯೊಬ್ಬರ ಅಗತ್ಯ ಈಡೇರಿಸುವಷ್ಟು ಸಮೃದ್ಧಿ ಇದೆ. ಆದರೆ ಪ್ರತಿಯೊಬ್ಬರ ದುರಾಸೆಯನ್ನು ಪೂರೈಸುವಷ್ಟು ಇಲ್ಲವೆಂಬ ಈ ಒಂದು ವಾಕ್ಯದ ಪರಿಸರ ನೀತಿ ಎಲ್ಲರಿಗೂ ಅನ್ವಯಿಸುವಂಥದ್ದಾಗಿದೆ. ಆದ್ದರಿಂದ ಪ್ಯಾರಿಸ್ ಒಪ್ಪಂದ ಎಷ್ಟೇ ಮಹತ್ವದ್ದಾಗಿದ್ದರೂ ಅದು ನಮ್ಮೆಲ್ಲರ ಹಿತ ಕಾಪಾಡಬೇಕಾದರೆ ನಾವೆಲ್ಲರೂ ಪ್ಯಾರಿಸ್ ಒಪ್ಪಂದದ ಅನುಷ್ಠಾನಕ್ಕೆ ಕಾಯಾ ವಾಚಾ ಮನಸಾ ದೃಢ ಸಂಕಲ್ಪ ಮಾಡಬೇಕು.

ಜನಪದ ವಿಚಾರ ಓದುಗರೆಲ್ಲರಿಗೂ

2016ನೇ ಇಸವಿಯ

ಹೊಸ ವರ್ಷದ ಹಾರ್ದಿಕ

ಶುಭಾಶಯಗಳು

ಮದ್ಯಪಾನ ನಿಷೇಧ ಒಂದು ಸವಾಲೇ?

– ಸುರೇಂದ್ರ ಕೌಲಗಿ

ಮದ್ಯ ಸೈತಾನನ ಶೋಧನೆ ಶ್ರೀಕೃಷ್ಣನ ವಂಶಜರಾದ ಯಾದವರು ಕುಡಿತದಿಂದ ಹಾಳಾದರು. ರೋಮ್ ಸಾಮ್ರಾಜ್ಯವು ಅದೇ ಕಾರಣದಿಂದ ಹಾಳಾಯಿತು. ೧೯೨೦ರಲ್ಲಿಯೇ ಕಾಂಗ್ರೆಸ್ ಮದ್ಯಪಾನ ವಿರುದ್ಧ ಕಾರ್ಯಕ್ರಮ ಹಾಕಿಕೊಂಡಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಮದ್ಯಪಾನ ನಿಷೇಧದ ವಿಚಾರ ಮತ್ತು ಮಾತು ನಡೆಯುತ್ತಲೇ ಇವೆ. ನಿಷೇಧ ಮಾಡಬೇಕೆ, ಬೇಡವೆ ಎಂಬ ವಿಚಾರ ಮಂಥನ ನಡೆಯುತ್ತಲೇ ಇದೆ. ಆದರೆ ಮಾತಾಗಲೀ, ವಿಚಾರವಾಗಲೀ ಕೃತಿಗೆ ಬರುತ್ತಲೇ ಇಲ್ಲ. ಬಂದರೂ ಸೀಮಿತ ಪ್ರದೇಶಗಳಲ್ಲಿ ಮಾತ್ರ. ಅದು ಕೂಡ ಅರೆಮನಸ್ಸಿನಿಂದ ಮದ್ಯಪಾನದ ಚಟಕ್ಕೆ ಬಲಿಯಾದ ವ್ಯಕ್ತಿಯ ಜೀವನವಷ್ಟೇ ಹಾಳಾಗುವುದಿಲ್ಲ ಅವನ ಸಂಸಾರವೇ ಹಾಳಾಗುತ್ತದೆಂಬ ಸಂಗತಿ ಎಲ್ಲರಿಗೂ ತಿಳಿದಿದೆ. ಅಧಿಕಾರದಲ್ಲಿ ಇರುವ ರಾಜಕಾರಣಿಗಳಿಗೂ, ಅಧಿಕಾರಿಗಳಿಗೂ ತಿಳಿದಿದೆ. ಆದರೆ ಮದ್ಯಪಾನದ ನಿಷೇಧವನ್ನು ಪೂರ್ಣವಾಗಿ ಜಾರಿಗೆ ತರಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇದೊಂದು ವಿರೋಧಾತ್ಮಕ ಸಂಗತಿ. ಯಾವುದೇ ರಾಜ್ಯ ಸರ್ಕಾರವು ಮದ್ಯಪಾನ ನಿಷೇಧ ಜಾರಿಗೆ ತರಬೇಕೆಂದು ಮನಸ್ಸು ಮಾಡಿದರೆ ಆ ಸರ್ಕಾರದ ಮುಖ್ಯಮಂತ್ರಿಗೆ ಯಾರೂ ತಮ್ಮ ನೈತಿಕ ಬೆಂಬಲ ಮತ್ತು ವ್ಯವಹಾರಿಕ ಬೆಂಬಲ ಕೊಡುವ ಇಚ್ಛೆಯನ್ನೆ ಮಾಡುವುದಿಲ್ಲ. ಎಲ್ಲರೂ ನಿಷೇಧದ ಜಾರಿಯ ಬಗ್ಗೆ ತಮ್ಮ ಸಂಶಯ ವ್ಯಕ್ತಪಡಿಸುತ್ತಾರೆ ಮತ್ತು ಇದು ಆಗುಹೋಗದ ಕಾರ್ಯಕ್ರಮವೆಂದು ಉದ್ಗಾರ ತೆಗೆಯುತ್ತಾರೆ! ರಾಜ್ಯದ ರಾಜಸ್ವಕ್ಕೆ ಅಪಾರ ನಷ್ಟ ಉಂಟಾಗುವುದೆಂಬ ಭೀತಿ ಹುಟ್ಟಿಸುತ್ತಾರೆ. ಇಂಥ ಅಭಿಪ್ರಾಯ ವ್ಯಕ್ತಪಡಿಸಿ ಮುಖ್ಯಮಂತ್ರಿಯ ಉತ್ಸಾಹವನ್ನು ಕುಂದಿಸುತ್ತಾರೆ. ಈಗ ಇಂಥದೇ ಕೆಲಸವೊಂದು ಬಿಹಾರ್ ರಾಜ್ಯದ ಮುಖ್ಯಮಂತ್ರಿ ನಿತೀಶ್‌ಕುಮಾರ್‌ಅವರೊಂದಿಗೆ ಆಗುತ್ತಿದೆ. ಮದ್ಯಪಾನದಿಂದ ಆಗುತ್ತಿದ್ದ ಜನರ, ಮುಖ್ಯವಾಗಿ ಮಹಿಳೆಯರ ತೊಂದರೆಗಳನ್ನು ಗಮನಿಸಿದ್ದ ನಿತೀಶ್‌ಕುಮಾರ್ ಇತ್ತೀಚೆಗೆ ನಡೆದ ರಾಜ್ಯದ ಸಾರ್ವತ್ರಿಕ ಚುನಾವಣೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮದ್ಯಪಾನ ನಿಷೇಧ ಮಾಡುವುದಾಗಿ ಭರವಸೆ ಕೊಟ್ಟಿದ್ದರು. ಅದರಂತೆ ಈಗ ಅಧಿಕಾರಕ್ಕೆ ಬಂದಾದ ಮೇಲೆ ಮದ್ಯಪಾನ ನಿಷೇಧ ಮಾಡಲು ಅವರು ತೀರ್ಮಾನಿಸಿದ್ದಾರೆ.

ಸಮಾಜವಾದಿ, ಗಾಂಧೀವಾದಿ ಮತ್ತು ಜಯಪ್ರಕಾಶ್ ನಾರಾಯಣರ ಅಭಿಮಾನಿಯಾದ ನಿತೀಶ್‌ಕುಮಾರ್ ಮದ್ಯಪಾನ ನಿಷೇಧದ ಬಗ್ಗೆ ಚಿಂತಿಸುತ್ತಿರುವುದು ಮತ್ತು ಕಾನೂನು ಮಾಡುತ್ತಿರುವುದು ಸಹಜವೇ ಆಗಿದೆ. ದೇಶದಲ್ಲಿ ಈಗಾಗಲೇ ಬೇರೆ ಬೇರೆ ರಾಜ್ಯಗಳು ಮದ್ಯಪಾನ ನಿಷೇಧ ಜಾರಿಮಾಡಲು ಸೋತು ಕೈಚೆಲ್ಲಿರಬಹುದು. ಅವುಗಳ ಸೋಲಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರೇರಿತವಾದ ಅನೇಕ ಕಾರಣಗಳಿರಬಹುದು. ದುರ್ಬಲ ಮತ್ತು ಭ್ರಷ್ಟ ಆಡಳಿತವೂ ಕಾರಣವಾಗಿರಬಹುದು. ಈ ಕಾರಣಗಳಿಂದ ನಿಷೇಧ ವಿಫಲವಾಗಿದ್ದರೂ ಕೂಡ ಮದ್ಯಪಾನ ಸಮಾಜವನ್ನು, ಮುಖ್ಯವಾಗಿ ಯುವಕರನ್ನು, ಹಾಳುಮಾಡುತ್ತಿದೆಯೆಂಬ ಸತ್ಯ ಮರೆಮಾಚಲು ಸಾಧ್ಯವಿಲ್ಲ. ಸಮಾಜ ಒಳ್ಳೆಯ ರೀತಿಯಲ್ಲಿ ಮುಂದುವರೆಯಬೇಕಾದರೆ ಜನರ ಗುಣವಿಕಾಸದ ಮೂಲಕವೇ ಸಾಧ್ಯ. ಮದ್ಯಪಾನ ಇದಕ್ಕೆ ತದ್ವಿರುದ್ಧವಾಗಿ ಗುಣನಾಶಮಾಡಿ ಸಮಾಜದ ಆರೋಗ್ಯವನ್ನು ಹಾಳುಮಾಡುತ್ತದೆ. ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವ ದೇಶಗಳಲ್ಲಂತೂ ಮದ್ಯಪಾನ ನಿಷೇಧ ಅತ್ಯಂತ ಅಗತ್ಯವಾಗುತ್ತದೆ. ಸಮಾಜದ ಗುಣವಿಕಾಸ ಮುಖ್ಯವೋ ಅಥವಾ ಬರುವ ವಿತ್ತೀಯ ಆದಾಯ ಮುಖ್ಯವೋ ಎಂಬ ನೈತಿಕ ಪ್ರಶ್ನೆಯನ್ನು ಸಹ ಇದೇ ಸಂದರ್ಭದಲ್ಲಿ ಪರಿಹರಿಸಬೇಕಿದೆ. ವಿತ್ತೀಯ ಆದಾಯವೇ ಮುಖ್ಯವೆಂದಾದಲ್ಲಿ ನಾವು ನಿಜಾರ್ಥದ ಪ್ರಜಾಪ್ರಭುತ್ವ ವ್ಯವಸ್ಥೆಯ ಆಸೆಯನ್ನೆ ಬಿಟ್ಟು ಕೊಡಬೇಕು. ಈಗಾಗಲೇ ಸಮಾಜದಲ್ಲಿ ಅಶಾಂತಿ, ಹಿಂಸೆ, ದೌರ್ಜನ್ಯ, ಅತ್ಯಾಚಾರ, ಕೊಲೆ, ಸುಲಿಗೆ, ಅಪಘಾತ ಮುಂತಾದವುಗಳು ಹೆಚ್ಚಾಗಿವೆ. ಇವುಗಳ ಪ್ರಮಾಣವನ್ನು ತಗ್ಗಿಸುವ ಬದಲಾಗಿ ಹೆಚ್ಚು ಮಾಡಬೇಕೆಂದು ರಾಜ್ಯಸರ್ಕಾರಗಳು ಬಯಸಿದಲ್ಲಿ ಅವುಗಳನ್ನು ಪ್ರಜಾಪ್ರಭುತ್ವ ವಿರೋಧಿ ಸರ್ಕಾರಗಳೆಂದೇ ಹೇಳಬೇಕಾಗುತ್ತದೆ.

ದೇಶದ ಜನಸಂಖ್ಯೆಯಲ್ಲಿ ಬಹು ಸಂಖ್ಯಾತ ಜನರು ಅದರಲ್ಲಿಯೂ ಮಹಿಳೆಯರು ಮದ್ಯಪಾನವ್ಯಸನಿಗಳಲ್ಲ. ಅಷ್ಟೇ ಅಲ್ಲ, ಅವರು ಮದ್ಯಪಾನ ವಿರೋಧಿಗಳು. ಇಸ್ಲಾಂಧರ್ಮವಂತೂ ಮದ್ಯಪಾನವನ್ನು ಪಾಪವೆಂದು ಪರಿಗಣಿಸುತ್ತದೆ. ಹಿಂದೂಧರ್ಮ ಮದ್ಯಪಾನವನ್ನು ಪ್ರೋತ್ಸಾಹಿಸಿಲ್ಲ. ಹಳ್ಳಿಗಳಲ್ಲಿ ರಚಿತಗೊಂಡಿರುವ ಸ್ತ್ರೀ ಸ್ವ ಸಹಾಯ ಸಂಘಗಳ ಸದಸ್ಯನೀಯರು ಮದ್ಯಪಾನದ ವಿರುದ್ಧ ಹೋರಾಟ ನಡೆಸಿದ್ದಾರೆ. ತಮ್ಮ ಹಳ್ಳಿಗಳಲ್ಲಿ ಕಾನೂನು ಬಾಹಿರವಾಗಿ ಮಾರಾಟಮಾಡುತ್ತಿರುವ ಮದ್ಯದಂಗಡಿಗಳನ್ನು ಮುಚ್ಚಿಸಬೇಕೆಂದು ಕೂಗು ಹಾಕುತ್ತಿದ್ದಾರೆ. ರಾಜ್ಯದಲ್ಲಿರುವ ಮದ್ಯಪಾನ ಸಂಯಮ ಮಂಡಳಿ ಕಾಲೇಜ್ ವಿದ್ಯಾರ್ಥಿಗಳ ಮಧ್ಯದಲ್ಲಿ ಮದ್ಯಪಾನದ ಕೆಡಕುಗಳ ಬಗ್ಗೆ ಜಾಗೃತಿ ಮೂಡಿಸುತ್ತಿದೆ. ಅದರ ಫಲವಾಗಿ ಅನೇಕ ಯುವಕರು ಮದ್ಯಪಾನ ತ್ಯಜಿಸುತ್ತಿದ್ದಾರೆ. ಜಿ.ಪಿ.ರಾಜರತ್ನಂ ಹೇಳುವಂತೆ ಅಶುಭದ ಒಡಲಲ್ಲಿ ಶುಭವಿದೆ.

ಅಹಿತದ ಗರ್ಭದಲ್ಲಿ ಹಿತವಿದೆ ಎಂಬ ಮಾತು ವಾಸ್ತವವೆನಿಸುತ್ತದೆ.

ಈಗ ಆಗಬೇಕಿರುವುದು ಬಲವಾದ ಮದ್ಯಪಾನ ನಿಷೇಧದ ಕಾರ್ಯಕ್ರಮ. ಮುಖ್ಯವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಮತ್ತು ಗ್ರಾಮ ಪಂಚಾಯತಿಗಳನ್ನು ಈ ಆಂದೋಲನದಲ್ಲಿ ಸೇರಿಸಿಕೊಳ್ಳಬೇಕು. ಇವುಗಳಲ್ಲದೆ ಎಲ್ಲ ಪ್ರಕಾರದ ಸಹಕಾರ ಸಂಘಗಳು ಆಂದೋಲನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು. ಎರಡನೆಯದಾಗಿ ಮದ್ಯಪಾನ ನಿಷೇಧದ ಕಾನೂನು ಇಡೀ ರಾಷ್ಟ್ರ ಮಟ್ಟದಲ್ಲಿಯೇ ಅನ್ವಯಗೊಳ್ಳಬೇಕು. ಮದ್ಯಪಾನ ನಿಷೇಧ ರಾಷ್ಟ್ರೀಯ ನೀತಿಯಾಗಬೇಕು. ಮದ್ಯಪಾನ ನಿಷೇಧದಿಂದ ಉಂಟಾಗುವ ವಿತ್ತೀಯ ಕೊರತೆಯನ್ನು ಬಹು ರಾಷ್ಟ್ರೀಯ ಕಂಪನಿಗಳ ಮೇಲೆ ಹೆಚ್ಚಿನ ತೆರಿಗೆ ಹಾಕುವುದರ ಮೂಲಕ ಮತ್ತು ಶಸ್ತ್ರಾಸ್ತ್ರಗಳಿಗಾಗಿ ಮಾಡುವ ಖರ್ಚನ್ನು ಕಡಿಮೆಮಾಡುವುದರ ಮೂಲಕ ಭರಿಸಿಕೊಳ್ಳಬೇಕು.

ಮದ್ಯಪಾನ ನಿಷೇಧದ ಕಾನೂನು ವಿಫಲಗೊಳ್ಳುತ್ತಿರುವುದಕ್ಕೆ ಕಾರಣ ಜನರ ಅಸಹಕಾರಕ್ಕಿಂತ ಸರ್ಕಾರಗಳ ಇಚ್ಛಾಶಕ್ತಿಯ ಕೊರತೆಯೇ ಪ್ರಧಾನವಾಗಿ ಕಾರಣವಾಗಿದೆ. "ಸ್ವತಂತ್ರ ಭಾರತದ ಸರ್ವಾಧಿಕಾರಿಯಾಗಿ ನನ್ನನ್ನು ಒಂದು ಗಂಟೆ ನಿಯಮಿಸಿದರೆ ಸಾಕು ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸುತ್ತೇನೆ ಮತ್ತು ಯಾವ ಪರಿಹಾರವೂ ಇಲ್ಲದೇ ಮದ್ಯ ತಯಾರಿಕೆಯನ್ನು ನಿಲ್ಲಿಸುತ್ತೇನೆ. ನಮ್ಮ ಮಧ್ಯೆ ಸಾವಿರಾರು ಜನ ಕುಡುಕರಿರುವುದಕ್ಕಿಂತ ಭಾರತ ದಿವಾಳಿಯೆದ್ದರೂ ಪರವಾಗಿಲ್ಲ ಮತ್ತು ಮದ್ಯಪಾನ ನಿಷೇಧ ಜಾರಿಗೊಳಿಸಲು ದೇಶಕ್ಕೆ ಶಿಕ್ಷಣವಿಲ್ಲದಿದ್ದರೂ ಚಿಂತೆಯಿಲ್ಲ" ಎಂಬುದಾಗಿ ಗಾಂಧೀಜಿಯವರು ೧೯೨೭ನೇ ಇಸವಿಯಲ್ಲೇ ಹೇಳಿದ್ದರು. ಅವರಲ್ಲಿದ್ದ ಪ್ರಬಲ ಇಚ್ಛಾಶಕ್ತಿಯ ಒಂದು ಅಂಶ ಇಂದಿನ ಸರ್ಕಾರಗಳಿಗೆ ಇದ್ದರೆ ಮದ್ಯಪಾನ ನಿಷೇಧ ಕಾನೂನು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ನಕಾರಾತ್ಮಕ ಮನೋಭಾವದಿಂದ ಮದ್ಯಪಾನ ನಿಷೇಧವನ್ನು ಜಾರಿಮಾಡದೆ ಸಕಾರಾತ್ಮಕ ಮನೋಭಾವದಿಂದ ಮಾಡಿದರೆ ಅದು ಸವಾಲೇ ಅಲ್ಲ ಸರಾಗ ದಾರಿ. ಪಾನಮುಕ್ತರು ಪಾನಮತ್ತರನ್ನು ಮುಕ್ತಮಾಡಲಿ.

ಭಾರತೀಯ ಶಾಲೆಗಳು ವಿದ್ಯಾರ್ಥಿಗಳನ್ನು ವಿಫಲಗೊಳಿಸುತ್ತಿವೆ

– ಗೀತಾ ಕಿಂಗ್‌ಡಮ್

ಎರಡು ದಶಕಗಳ ನಂತರ ಮೊದಲ ಬಾರಿಗೆ ಭಾರತ ಸರ್ಕಾರ ತನ್ನ ಶಿಕ್ಷಣ ನೀತಿಯನ್ನು ಕುರಿತು ಪುನರ್‌ವಿಮರ್ಶಿಸುತ್ತಿದೆ. ಈ ಪುನರ್‌ವಿಮರ್ಶೆಯ ಉದ್ದೇಶ ಭಾರತವನ್ನು "ಒಂದು ಜ್ಞಾನಭಂಡಾರದ ಮಹಾನ್ ಶಕ್ತಿಯನ್ನಾಗಿ" ಮಾಡುವುದೇ ಆಗಿದೆ. ಅದಕ್ಕಾಗಿ ಒಂದು ಉತ್ತಮವಾದ ದಾರಿಯನ್ನು ಕಂಡುಹಿಡಿದು ಬದಲಾಗುತ್ತಿರುವ ಜನಸಂಖ್ಯಾ ವಿಶೇಷತೆಗೆ ಅನುಗುಣವಾಗಿರುವಂತೆ ಮಾಡುವುದಾಗಿದೆ. ಅದರಲ್ಲಿಯೂ ಬೆಳೆಯುತ್ತಿರುವ ತಾರುಣ್ಯ ಶಕ್ತಿಯನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಶಿಕ್ಷಣ ನೀತಿಯ ಪುನರ್‌ವಿಮರ್ಶೆ ಸಕಾಲಿಕವಾಗಿದೆ. ೨೦೦೯ರಲ್ಲಿ ಶಿಕ್ಷಣದ ಹಕ್ಕು ಜಾರಿಗೆ ಬಂದಿತು. ಅಂದಿನಿಂದ ಭಾರತದ ಶಿಕ್ಷಣ ನೀತಿ ಅಪಾಯಕಾರಿಯಾಗುವಷ್ಟು ದಾರಿ ತಪ್ಪಿದೆ. ಆರರಿಂದ ಹದಿನಾಲ್ಕು ವರ್ಷದ ಮಕ್ಕಳಿಗೆಲ್ಲ ಒಳ್ಳೆಯ ಶಿಕ್ಷಣ ಕೊಡುವ ಉದ್ದೇಶ ಈ ಕಾನೂನಿನದಾಗಿತ್ತು. ಅದೊಂದು ದೊಡ್ಡ ಸುಧಾರಣೆಯ ಮೈಲಿಗಲ್ಲೆಂದು ಭಾವಿಸಲಾಗಿತ್ತು. ಆದರೆ ಆರು ವರ್ಷಗಳ ನಂತರವೂ ಶಾಲೆಗೆ ಸೇರುವ ಮಕ್ಕಳ ಸಂಖ್ಯೆಯಲ್ಲಿ ಸುಧಾರಣೆಯೇನು ಆಗಿಲ್ಲ. ಮತ್ತು ಶಿಕ್ಷಣ ತೀವ್ರಗತಿಯಲ್ಲಿ ಅವನತಿ ಹೊಂದಿದೆ. ೨೦೧೧ರ ಜನಗಣತಿಯ ಮೇರೆಗೆ ದೇಶದ ಜನಸಂಖ್ಯೆಯಲ್ಲಿ ೪೧%ರಷ್ಟು ಜನಸಂಖ್ಯೆ ೧೯ ವರ್ಷದ ಕೆಳಗಿನವರದಾಗಿದೆ. ಭಾರತ ತನ್ನ ಭವಿಷ್ಯದ ಆರ್ಥಿಕ ಬೆಳವಣಿಗೆಯನ್ನು ಮುನ್ನಡೆಸಲು ಈ ಯುವಶಕ್ತಿಯ ಮೇಲೆ ಭರವಸೆ ಇರಿಸಿಕೊಂಡಿದೆ. ಆದರೆ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ೭೦% ರಷ್ಟು ಸಾರ್ವಜನಿಕವಲಯದ ಶಾಲೆಗಳು ಆಪತ್ತಿನ ಕೂಪವಾಗಿವೆ. ೨೦೦೯ರಲ್ಲಿ ಮಾಡಿದ ೭೪ ದೇಶಗಳಲ್ಲಿಯ ಸರ್ವೇಕ್ಷಣದಲ್ಲಿ ಭಾರತ ಕೊನೆಯ ೨ನೇ ಸ್ಥಾನದಲ್ಲಿದೆ. ಅಂದಿನಿಂದ ಅಂಥ ಸರ್ವೇಕ್ಷಣದಲ್ಲಿ ಭಾಗವಹಿಸಲು ಭಾರತ ನಿರಾಕರಿಸಿದೆ. ಶಿಕ್ಷಣದ ಹಕ್ಕು ಕಾಯ್ದೆ ಪರಿಸ್ಥಿತಿಯನ್ನು ಇನ್ನೂ ಹೆಚ್ಚು ಬಿಗಡಾಯಿಸುವಂತೆ ಮಾಡಿದೆ.

ಕಾನೂನಿನ ಪ್ರಕಾರ ಪ್ರತಿ ಗ್ರಾಮ ಸಮುದಾಯದಲ್ಲಿ ಉಚಿತ ಸಾರ್ವಜನಿಕ ಶಾಲೆಗಳನ್ನು ಸ್ಥಾಪಿಸಬೇಕು. ಖಾಸಗಿ ಶಾಲೆಗಳನ್ನು ಸ್ಥಾಪಿಸುವ ಬಗ್ಗೆ ಕೆಲವು ನಿರ್ಬಂಧನೆಗಳನ್ನು ಕಾನೂನು ಹಾಕುತ್ತದೆ. ಆ ನಿರ್ಬಂಧನೆಗಳಲ್ಲಿ ಕನಿಷ್ಠ ಗುಣಮಟ್ಟದ ಮೂಲಭೂತ ಸೌಕರ್ಯಗಳಿರಬೇಕು ಮತ್ತು ಇಂತಿಷ್ಟೆ ಸಿಬ್ಬಂದಿ ಇರಬೇಕು, ೩೦

ಮಕ್ಕಳಿಗೆ ಓರ್ವ ಅಧ್ಯಾಪಕರಿರಬೇಕು ಮುಂತಾದ ನಿರ್ಬಂಧಗಳಿವೆ. ಅಲ್ಲದೆ ಖಾಸಗಿ ಶಾಲೆಗಳು ಸಮಾಜದಲ್ಲಿರುವ ಯಾವುದೇ ಪ್ರಕಾರದ ತೊಂದರೆಗೊಳಗಾಗಿರುವ ಮಕ್ಕಳಿಗೆ ೨೫% ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಸಹ ಶಿಕ್ಷಣ ಕಾನೂನು ಹೇಳುತ್ತದೆ. ಈ ಎಲ್ಲ ಕ್ರಮಗಳು ಎಷ್ಟೇ ಅರ್ಥಪೂರ್ಣವೆಂದೆನಿಸಿದರೂ ಅ ಪರಿಣಾಮಕಾರಿಯಾಗಿಯೇ ಉಳಿದಿವೆ. ಅಷ್ಟೇ ಅಲ್ಲ ಕೆಲವೊಂದು ಸಲ ವ್ಯತಿರಿಕ್ತ ಪರಿಣಾಮವು ಉಂಟಾಗಿದೆ. ೨೦೦೯ರಲ್ಲಿ ಆರರಿಂದ ಹದಿನಾಲ್ಕು ವರ್ಷದ ಮಕ್ಕಳ ಶಾಲಾ ಪ್ರವೇಶ ೧೦೦ಕ್ಕೆ ೯೫ರಷ್ಟು ಆಗಿದೆ. ಆದ್ದರಿಂದ ಇನ್ನೂ ಸಾರ್ವಜನಿಕ ಶಾಲೆಗಳನ್ನು ಪ್ರಾರಂಭಿಸುವುದು ಅಗತ್ಯವಾಗಿದೆ. ಆದರೆ ಹಾಗಾಗಲಿಲ್ಲ ಏಕೆಂದರೆ ಶಿಕ್ಷಣದ ಗುಣಮಟ್ಟದ ಬಗ್ಗೆ ಖಾತ್ರಿ ಇಲ್ಲದ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಕೆಲವೇ ಕೆಲವು ತಂದೆ - ತಾಯಿಗಳು ಮುಂದೆ ಬಂದಿದ್ದಾರೆ. ಶಿಕ್ಷಣ ಹಕ್ಕು ಕಾಯ್ದೆ ಅನುಷ್ಠಾನಕ್ಕೆ ಬಂದಾಗಿನಿಂದ ಸಾರ್ವಜನಿಕ ಶಾಲೆಗಳಲ್ಲಿಯ ಒಟ್ಟಾರೆ ಮಕ್ಕಳ ಪ್ರವೇಶ ೧.೬ ದಶಲಕ್ಷದಷ್ಟು ಕಡಿಮೆಯಾಗಿದೆ. ಅದೇ ಹೊತ್ತಿಗೆ ಖಾಸಗೀ ಶಾಲೆಗಳಲ್ಲಿಯ ಪ್ರವೇಶ ಸಂಖ್ಯೆ ೧೬.೪ ದಶಲಕ್ಷ ವಿದ್ಯಾರ್ಥಿಗಳಷ್ಟಾಗಿದೆ. ೨೦೧೪-೧೫ ನೇ ಶೈಕ್ಷಣಿಕ ವರ್ಷದಲ್ಲಿ ದೇಶದಲ್ಲಿಯ ೯೭ ಸಾವಿರ ಸರ್ಕಾರಿ ಶಾಲೆಗಳಲ್ಲಿ ೨೦ ಅಥವಾ ಇನ್ನೂ ಕಡಿಮೆ ವಿದ್ಯಾರ್ಥಿಗಳಿದ್ದರು.

ಶಿಕ್ಷಣ ಹಕ್ಕು ಕಾಯ್ದೆಯ ವಿದ್ಯಾರ್ಥಿ - ಶಿಕ್ಷಕ ಅನುಪಾತವನ್ನು ಕಡಿಮೆಗೊಳಿಸುವ ಮತ್ತು ಮೂಲಭೂತ ಸೌಕರ್ಯಗಳಲ್ಲಿಯ ಸುಧಾರಣೆಯ ಉದ್ದೇಶಗಳನ್ನು ತಪ್ಪಾಗಿ ಜಾರಿಗೆ ತರಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ ಪ್ರಕಾರ ಈ ಎರಡು ಸುಧಾರಣೆಗಳು ಕಡ್ಡಾಯವಾಗಿ ಉತ್ತಮ ಪ್ರಕಾರದ ಶಿಕ್ಷಣಕ್ಕೆ ದಾರಿಮಾಡಿಕೊಡುತ್ತದೆ ಎಂದು ಹೇಳಲಾಗುವುದಿಲ್ಲ. ಭಾರತದಲ್ಲಿ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಸೌಕರ್ಯಗಳು ಆಟದ ಮೈದಾನಗಳು ಹಾಗೂ ಅಧ್ಯಾಪಕರು ಇದ್ದಾಗ್ಯೂ ತರಭೇತಿ ಪಡೆದ ಕಡಿಮೆ ಶುಲ್ಕ ಪಡೆಯುವ ಖಾಸಗಿ ಶಾಲೆಗಳಿಗಿಂತ ಉತ್ತಮ ಸಾಮರ್ಥ್ಯ ತೋರಿಸುತ್ತಿಲ್ಲ.

ಪ್ರಥಮ್ ಎಂಬ ಸರ್ಕಾರೇತರ ಸಂಸ್ಥೆ ನಡೆಸಿದ ಇತ್ತೀಚಿಗಿನ ಶೈಕ್ಷಣಿಕ ಸ್ಥಿತಿಗತಿಯ ವರದಿ ಪ್ರಕಾರ ೨೦೦೮ರಿಂದ ಈಚೆಗೆ ಓದುವುದರಲ್ಲಿಯೇ ದಕ್ಷತೆ ಸರ್ಕಾರಿ ಶಾಲೆಗಳ ಮಕ್ಕಳಲ್ಲಿ ಖಾಸಗಿ ಶಾಲೆಯ ಮಕ್ಕಳಿಗಿಂತ ಕಡಿಮೆಯಾಗಿದೆಯೆಂದು ಹೇಳುತ್ತದೆ. ಶಿಕ್ಷಣ ಹಕ್ಕು ಕಾಯ್ದೆಯ ಇನ್ನೊಂದು ದುರಂತ ಸಂಗತಿಯೆಂದರೆ ಕಡಿಮೆ ಶುಲ್ಕ ತೆಗೆದುಕೊಂಡು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದ ಅನೇಕ ಖಾಸಗಿ ಶಾಲೆಗಳು ಸರ್ಕಾರ ಮೂಲಭೂತ ಸೌಕರ್ಯಗಳ ಕಡ್ಡಾಯ ನಿರ್ಮಾಣದ ನಿಯಮಗಳ ಕಾರಣದಿಂದಾಗಿ ಮುಚ್ಚಿಹೋಗಿವೆ. ಮುಚ್ಚಿಹೋದ ಖಾಸಗಿ ಶಾಲೆಗಳು ಸರ್ಕಾರಿ ಶಾಲೆಗಳಿಗಿಂತ ಉತ್ತಮವಾದ ಫಲಿತಾಂಶ ನೀಡುತ್ತಿದ್ದವು. ಹೊಸದೆಹಲಿಯಲ್ಲಿರುವ

ರಾಷ್ಟ್ರೀಯ ಸ್ವತಂತ್ರ ಶಾಲೆಗಳ ಒಕ್ಕೂಟ ನಡೆಸಿದ ಅಧ್ಯಯನದ ಪ್ರಕಾರ ೨೦೧೪ರ ಪ್ರಾರಂಭದಲ್ಲಿ ೪,೩೩೧ ಖಾಸಗಿ ಶಾಲೆಗಳು ಮುಚ್ಚಿಹೋಗಿವೆ. ಅಲ್ಲದೆ ಇನ್ನು ೧೫,೦೮೩ ಶಾಲೆಗಳಿಗೆ ಮುಚ್ಚುವಂತೆ ನೋಟೀಸ್ ಕೊಡಲಾಗಿದೆ. ಇದರಿಂದಾಗಿ ನಾಲ್ಕು ದಶಲಕ್ಷ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನ ತಲ್ಲಣಗೊಳ್ಳಲಿದೆ. ಇನ್ನೊಂದು ದುರಂತ ಸಂಗತಿಯೆಂದರೆ ಮುಚ್ಚಿಹೋದ ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗಳಿಗೆ ಬಂದ ಮಕ್ಕಳಿಗೆ ಅವರು ಮೊದಲಿದ್ದ ಖಾಸಗಿ ಶಾಲೆಗಳಲ್ಲಿಯ ಗುಣಮಟ್ಟದ ಶಿಕ್ಷಣವನ್ನು ಈ ಸರ್ಕಾರಿ ಶಾಲೆಗಳು ಕೊಡಲಾಗುತ್ತಿಲ್ಲ. ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ಪೋಷಕರು ತಮ್ಮ ಇಚ್ಛೆಯ ಶಾಲೆಯನ್ನು ಆಯ್ಕೆಮಾಡಿಕೊಳ್ಳಲು ಇರುವ ಅವಕಾಶ ಕೂಡ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಲು ಸಾಧ್ಯವಾಗಿಲ್ಲ.

ಖಾಸಗಿ ಶಾಲೆಗಳು ತಮ್ಮಲ್ಲಿಯ ಒಟ್ಟು ಸ್ಥಳಾವಕಾಶದಲ್ಲಿ ೨೫%ರಷ್ಟನ್ನು ಬಡ ಮತ್ತು ವಿವಿಧ ಕಾರಣಗಳಿಂದಾಗಿ ತೊಂದರೆಗೊಳಗಾಗಿರುವ ಮಕ್ಕಳಿಗೆ ಪ್ರವೇಶ ಕೊಡಬೇಕೆಂಬ ನಿಯಮವೂ ಕೂಡ ಸರಿಯಾಗಿ ಪಾಲನೆ ಆಗುತ್ತಿಲ್ಲ. ಲಾಟರಿ ಎತ್ತುವುದರ ಮೂಲಕ ಅಂಥ ವಿದ್ಯಾರ್ಥಿಗಳನ್ನು ಆಯ್ಕೆಮಾಡಬೇಕೆಂದು ಕಾಯ್ದೆ ಹೇಳುತ್ತದೆ. ಆದರೆ ಈ ಕ್ರಮವನ್ನು ಜಾರಿಗೆ ತರುವುದು ಕಷ್ಟ ಏಕೆಂದರೆ ಅನೇಕ ರಾಜ್ಯಗಳಲ್ಲಿರುವ ಅದಕ್ಷ ಆಡಳಿತ ಈ ಆಯ್ಕೆ ಪದ್ಧತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತದೆ. ಯಾವ ವಿದ್ಯಾರ್ಥಿಗಳು ಸಹಾಯಕ್ಕೆ ಯೋಗ್ಯರೆಂದು ಗುರುತಿಸುವುದು ಕಷ್ಟವಾಗುತ್ತದೆ. ಪರಿಹಾರೋಪಾದಿಯಾಗಿ ಸರ್ಕಾರಕೊಡುವ ಸಹಾಯಧನವನ್ನು ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಉಪಯೋಗಿಸಬಹುದಲ್ಲ ಎಂಬುದಾಗಿ ರಾಜ್ಯ ಸರ್ಕಾರಗಳು ಹೇಳುತ್ತಿವೆ.

ಶಿಕ್ಷಣ ಹಕ್ಕು ಕಾಯ್ದೆ ವಿಫಲಗೊಂಡಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಹೊಸ ಶಿಕ್ಷಣ ನೀತಿಯ ಬಗ್ಗೆ ಚರ್ಚೆನಡೆದಿದೆ. ಆ ಹೊಸ ನೀತಿಯ ಕರಡನ್ನು ಈ ತಿಂಗಳ ಹೊತ್ತಿಗೆ ತಯಾರಿಸಲಾಗುತ್ತದೆ. ಈ ಹೊಸ ನೀತಿ ಜಾರಿಗೆ ಬಂದಲ್ಲಿ ಇದುವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ತೊಂದರೆಯನ್ನು ನಿವಾರಿಸಬಹುದಾಗಿದೆ. ಹೊಸ ಶಿಕ್ಷಣ ಹಕ್ಕು ಕಾಯ್ದೆಯನ್ನು ಕಲಿಯುವ ಹಕ್ಕು ಎಂಬ ಕಾಯ್ದೆಯಿಂದ ಸ್ಥಳಾಂತರಿಸಲಾಗುವುದು. ಹೊಸ ಶಿಕ್ಷಣ ನೀತಿಯ ಕರಡನ್ನು ತಯಾರಿಸಲು ನಾಲ್ಕು ಜನ ಅಧಿಕಾರಿಗಳು ಮತ್ತು ಓರ್ವ ನಿವೃತ್ತ ಶಿಕ್ಷಣ ತಜ್ಞರು ತೊಡಗಿದ್ದಾರೆ. ಅವರು ಇದುವರೆಗೆ ಸುಮಾರು ೨ ಲಕ್ಷ ೭೫ ಸಾವಿರ ಜನರಿಂದ ಚರ್ಚೆಯ ಮೂಲಕ ಬಂದಿರುವ ಸಲಹೆಗಳನ್ನು ಪರಿಶೀಲಿಸುತ್ತಿದ್ದಾರೆ. ಅವರ ಮುಖ್ಯ ಗುರಿ ಕಲಿಯುವ ಹಕ್ಕು ಎಂಬ ಕಾಯ್ದೆಯನ್ನು ಮಾಡಲು ಶಿಫಾರಸ್ಸು ಮಾಡುವುದು. ಕಲಿಯುವ ಹಕ್ಕು ಕಾನೂನು ಬೋಧನಾ ಸಾಮರ್ಥ್ಯದ ಗುಣಮಟ್ಟವನ್ನು ಹೆಚ್ಚಿಸುವ ಕಡೆಗೆ

ಗಮನವೀಯುತ್ತದೆ.

ಅಧ್ಯಾಪಕರ ಪ್ರಶಿಕ್ಷಣ ವ್ಯವಸ್ಥೆ ತುರ್ತಾಗಿ ಸುಧಾರಣೆಗೊಳ್ಳಬೇಕಾಗಿದೆ. ಶಿಕ್ಷಕರೆ ಮೂಲ ಭಾಷೆಯನ್ನೇ ಸರಿಯಾಗಿ ತಿಳಿದುಕೊಂಡಿರುವುದಿಲ್ಲ. ಅದೇ ರೀತಿ ಗಣಿತ ಪಠ್ಯ ಪುಸ್ತಕಗಳಲ್ಲಿಯ ಪಾಠಗಳನ್ನೂ ಕೂಡ. ಇವತ್ತಿನ ಪದ್ಧತಿಯ ಪ್ರಕಾರ ಅಧ್ಯಾಪಕರನ್ನು ನಿಯಮಿಸುವ ಮತ್ತು ಮೇಲ್ವಿಚಾರಣೆಮಾಡುವ ಕೆಲಸವನ್ನು ಜಿಲ್ಲಾ ಮಟ್ಟದ ಸರ್ಕಾರಿ ಇಲಾಖೆ ಮಾಡುತ್ತದೆ. ಈ ಅಧಿಕಾರವನ್ನು ಸ್ಥಳೀಯ ಶಾಲಾ ವ್ಯವಸ್ಥಾ ಮಂಡಲಿಗೆ ವರ್ಗಾಯಿಸುವುದು ಒಳ್ಳೆಯದು. ಏಕೆಂದರೆ ಶಾಲಾ ವ್ಯವಸ್ಥಾ ಮಂಡಲಿ ಅಧ್ಯಾಪಕರ ವೃತ್ತಿ ಕೌಶಲ್ಯವನ್ನು ಅಳೆಯಲು ಹೆಚ್ಚು ಸಮರ್ಥವಾಗಿರುತ್ತದೆ. ಖಾಸಗಿ ಶಾಲೆಗಳಿಗೆ ಸರ್ಕಾರ ಒಪ್ಪಿಗೆ ಕೊಡುವಾಗ ಅವು ಹೊಂದಿರುವ ಮೂಲಭೂತ ಸೌಕರ್ಯಗಳಿಗಿಂತ ಹೆಚ್ಚಾಗಿ ಅಥವಾ ಅಧ್ಯಾಪಕ ವಿದ್ಯಾರ್ಥಿ ಅನುಪಾತ ಇತ್ಯಾದಿ ಗಮನಿಸದೆ ಪ್ರತ್ಯಕ್ಷ ಕಲಿಕೆಯ ಕನಿಷ್ಠ ಗುಣಮಟ್ಟವನ್ನು ಪರಿಶೀಲಿಸಬೇಕು. ಸರ್ಕಾರಿ ಶಾಲೆಗಳಿಗೆ ಈಗ ಕೊಡಲಾಗುತ್ತಿರುವ ಒಟ್ಟಾರೆ ಬಜೆಟ್ ಬದಲಾಗಿ ಆಯಾ ಶಾಲೆಯಲ್ಲಿಯ ಪ್ರತಿಯೋರ್ವ ವಿದ್ಯಾರ್ಥಿ ಆಧಾರದ ಮೇಲೆ ಕೊಡುವಂತಾಗಬೇಕು. ಇದರಿಂದಾಗಿ ಸರ್ಕಾರಿ ಶಾಲೆಗಳು ತಮ್ಮ ಬೋಧನಾ ಕ್ರಮದ ಗುಣಮಟ್ಟವನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಶಾಲೆಯಲ್ಲಿಯೇ ಉಳಿದುಕೊಳ್ಳುವಂತೆ ಮಾಡಲು ಸಾಧ್ಯವಾಗುವುದು.

ಪ್ರತಿಯೊಂದು ಜಿಲ್ಲೆಯಲ್ಲಿರುವ ಹಲವಾರು ಬಗೆಯ ಶಾಲೆಗಳ ಶೈಕ್ಷಣಿಕ ಸಾಧನೆಯ ಮಾಹಿತಿಯನ್ನು ತಂದೆ – ತಾಯಿಯರಿಗೆ ಕೊಡುವಂತಾಗಬೇಕು. ಆಗ ಅವರು ತಮ್ಮ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕೆಂಬ ಬಗ್ಗೆ ಯೋಚನಾಪೂರ್ವಕವಾದ ತೀರ್ಮಾನ ಕೈಗೊಳ್ಳಲು ಸಮರ್ಥರಾಗುವರು. ವಿದ್ಯಾರ್ಥಿಗಳ ಕಲಿಕಾ ಮಟ್ಟಗಳನ್ನು ಸುಧಾರಿಸುವ ನಿಟ್ಟಿನತ್ತ ಭಾರತ ತನ್ನ ಶಿಕ್ಷಣ ನೀತಿಯನ್ನು ಪುನರ್ ವಿಮರ್ಶಿಸಬೇಕು. ಆಗಿಲ್ಲವಾದರೆ ಕೋಟ್ಯಾಂತರ ಮಕ್ಕಳ ಜೀವನವನ್ನು ಹಾಳುಮಾಡಿದಂತಾಗುತ್ತದಷ್ಟೇ ಅಲ್ಲ ದೇಶದ ಆರ್ಥಿಕ ಮುನ್ನಡೆಯನ್ನೂ ಕೂಡ ತಪ್ಪಿಸಿದಂತಾಗುತ್ತದೆ.

(ಸಾಭಾರ – ಅಂತರರಾಷ್ಟ್ರೀಯ ನ್ಯೂಯಾರ್ಕ್ ಟೈಮ್ಸ್ ಮತ್ತು ಡೆಕ್ಕನ್ ಹೆರಾಲ್ಡ್, ಅನು – ಸುಕೌ)

ವಿಶ್ವವ್ಯವಸ್ಥೆಯ ಮೂಲಸೂತ್ರ - ಗೀತೆ

– ವಿದ್ವಾನ್ ಉಮಾಕಾಂತ ಭಟ್ಟ

ಭಾರತೀಯರನ್ನು ಪುಳಕಗೊಳಿಸುವ ಪವಿತ್ರವಾದ ಹೆಸರು ಭಗವದ್ಗೀತೆ. ಅದು ನಮ್ಮ ಜೀವನದ ಮೂಲಾಧಾರ. ಆದುದರಿಂದ ನಮಗೆ ಪರಮ ಪ್ರಮಾಣ. ಅರಿತರೂ, ಮರೆತರೂ ನಾವೆಲ್ಲ ಗೀತಾಬಂಧುಗಳು. ಅದು ನಮಗೆ ತಾಯಿ, ತಂದೆ, ಬಂಧು, ಬಳಗ, ಗುರು, ಗೆಳೆಯ ಎಲ್ಲವೂ. ಕಾಲ ಕಾಲಕ್ಕೆ ಭಾರತೀಯರಾದ ನಮ್ಮ ಮೈಮ್ಮನಗಳನ್ನು ತುಂಬಿಸಿಕೊಡುವ ಜೀವಾಮೃತ ಗೀತೆ. ಅದು ನಮ್ಮ ಭಾವ - ಬುದ್ಧಿಗಳನ್ನು ಪುಟಗೊಳಿಸುವ ಸಿದ್ಧೌಷಧ. ಕಷ್ಟ-ನಷ್ಟಗಳನ್ನು ನೀಗಿಸುವ ತವನಿಧಿ. ಶೋಕ ವ್ಯಾಕುಲಗಳನ್ನು ನಿವಾಳಿಸುವ ಕಾಯಕಲ್ಪ. ಆದುದರಿಂದ ನಮಗದು ಎಂದೆಂದಿಗೂ ಪ್ರಸ್ತುತ, ಪೂಜ್ಯ. ಅದನ್ನು ಎದೆಗೊತ್ತಿ ತಲೆಯ ಮೇಲೆ ಹೊತ್ತು ನಾವು ಬಾಳುವಂತಾದರೆ ಧನ್ಯರಾಗುತ್ತೇವೆ, ವಿಶ್ವವಂದ್ಯರಾಗುತ್ತೇವೆ.

ಗೀತೆ ಅರಮನೆಯ ಅಂಗಳದಲ್ಲಿ ಇಳಿದು ಬರಲಿಲ್ಲ. ಗಹನವಾದ ಅರಣ್ಯದಲ್ಲಿ ಮೊಳಗಿ ಬರಲಿಲ್ಲ. ಪ್ರಶಾಂತವಾದ ಗುರುಕುಲ ಪರಿಸರದಲ್ಲಿ ಮೇಲೇಳಲಿಲ್ಲ. ಅದು ಅವತರಿಸಿದ್ದುದು ರಣರಂಗದಲ್ಲಿ. ಬದುಕು ರಣರಣಿಸಿ ಹುಡಿಯಾಗುವ ಹುಡಿಭೂಮಿಯಲ್ಲಿ. ಅದು ಬದುಕನ್ನು ಇಡಿಯಾಗಿ ಕಟ್ಟಿಕೊಡುವ ಹೊಣೆಯನ್ನು ಹೊತ್ತಿದೆ. ಇಹವನ್ನು ಮರೆಯದೇ ಪರವನ್ನು ಮರೆಸದೇ ಇಹಪರಗಳನ್ನು ಬೆಳಗಿಸುವ ಬಾಳನ್ನು ಕಾಣಿಸುವ ವಾಙ್ಮಯ ಭಗವದ್ಗೀತೆ. ಆದುದರಿಂದ ಸಂಸಾರದಲ್ಲಿ ಇಳಿದು ಈಜುವರಿಗೆ ಇದು ನಿರ್ಮಲವಾದ ಕೊಳವಾದರೆ ಸಂಸಾರವನ್ನು ದಾಟುವವರಿಗೆ ಸುರಕ್ಷಿತವಾಗಿ ದಡಕ್ಕೆ ಸೇರಿಸುವ ನೌಕೆ.

ಗೀತೆ ಭಗವಂತನೇ ಹಾಡಿದ ಹಾಡು. ಪರಮಾತ್ಮನೇ ಪರಮಾಪ್ತವಾಗಿ ಜೀವಾತ್ಮನ ಹಿತವನ್ನು ಹಾರೈಸಿ ಹಾಡಿದ ಹಾಡು. ಆದುದರಿಂದ ಅದು ಸತ್ಯದ ಹಾಡು, ತತ್ವದ ಹಾಡು. ಜೀವನ ಪಾಡನ್ನು ದೇವ ಹಾಡಿದ; ಭಕ್ತನ ಪಾಡನ್ನು ಭಗವಂತ ನೀಡಿದ. ಹಾಗಾಗಿ ಭಗವದ್ಗೀತೆ ಜೀವ - ದೇವ ಸಂವಾದ; ಭಕ್ತ-ಭಗವಂತ ಸಲ್ಲಾಪ.

ಅರ್ಜುನನಿಗೆ ಗೀತೆಯನ್ನು ಉಪದೇಶಿಸಿದ ಶ್ರೀಕೃಷ್ಣ ಗೀತಾಚಾರ್ಯನಾದ. ಅರಮನೆಯಲ್ಲಿ ಹುಟ್ಟಬೇಕಾದ ಅವನು ಸೆರೆಮನೆಯಲ್ಲಿ ಹುಟ್ಟಿದ. ಶ್ರಾವಣ ಮಾಸ ಕೃಷ್ಣ ಪಕ್ಷ ಅಷ್ಟಮಿಯ ರಾತ್ರಿ, ಕಾರ್ಗಾಲದ ಕತ್ತಲಿನಲ್ಲಿ ಅವತರಿಸಿದ. ಭೂಮಿಯ ಭಾಗದ ಬೆಳಕಾಗಿ ಉದಯಿಸಿ ಬಂದ. ಅವನು ಅಲ್ಲಿ ಆಗ ಇಳಿದು ಬಂದುದೇ ಸೆರೆಮನೆಯ ಕತ್ತಲಲ್ಲಿ ನರಳುತ್ತಿದ್ದ ತಂದೆ-ತಾಯಿಯರನ್ನು ಬಿಡಿಸುವುದಕ್ಕಾಗಿ. ಸಂಸಾರ

ಸೆರೆಮನೆಯನ್ನು ಕಂಡ ವಿರಕ್ತ ಭಕ್ತರನ್ನು ಅಲ್ಲಿಂದ ಪಾರುಮಾಡುವುದಕ್ಕಾಗಿ. ಆದುದರಿಂದ ಅವನ ಮಾತು ಸ್ವಾತಂತ್ರ್ಯ ಗೀತೆಯಾಯಿತು. ಬಂಧ ವಿಮೋಚನೆಗಾಗಿ ಒತ್ತರಿಸಿದ ಜೀವಕಾರುಣ್ಯದ ಕಡಲಾಯಿತು. ಆ ಕಾರಣದಿಂದಲೋ ಏನೋ! ಬಾಲ ಗಂಗಾಧರ ತಿಲಕ, ಮಹಾತ್ಮಾ ಗಾಂಧಿ ಮತ್ತು ಅರವಿಂದ ಘೋಷರು ಸೆರೆವಾಸದ ಅವಧಿಯಲ್ಲೇ ಗೀತೆಯನ್ನು ಹೊಸ ದೃಷ್ಟಿಕೋನಗಳಿಂದ ನೋಡಿ ವಿಸ್ತಾರವಾದ ಭಾಷ್ಯವನ್ನು ಬರೆದರು. ಗೀತೆಯಿಂದಲೇ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ಫೂರ್ತಿಯನ್ನು ಪಡೆದರು.

ಶ್ರೀಕೃಷ್ಣ ಅರ್ಜುನನನ್ನು ನೆಪ ಮಾಡಿಕೊಂಡು ವಿಶ್ವರಹಸ್ಯವನ್ನು ಒಡೆದ. ಬದುಕಿನ ಗುಟ್ಟನ್ನು ಬಯಲು ಮಾಡಿದ. ಹೃದಯದ ಗಂಟನ್ನು ಬಿಚ್ಚಿದ. ಸತ್ಯದ ಅಮೃತಧಾರೆಯನ್ನೇ ಹರಿಸಿದ.

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ಶ್ರೀಕೃಷ್ಣ ಗೋಪಾಲ – ಗೋವುಗಳನ್ನು ಪಾಲಿಸುವವ. ಗೋಶಬ್ದಕ್ಕೆ ಭೂಮಿ, ವೇದ ಮೊದಲಾದ ಅರ್ಥಗಳಿವೆಯಷ್ಟೇ. ಆದ್ದರಿಂದ ಅವನು ಭೂಮಿಯನ್ನೂ ವೇದಗಳನ್ನೂ ಕಾಪಾಡುವವನು. ವೇದ ಶಾಖೆಗಳನ್ನು ಅವನೇ ಕರುಣಿಸಿದವನು. ಅವು ಅವನ ವಶವರ್ತಿಯಾದ ಗೋವುಗಳು. ಅವುಗಳನ್ನು ಅಕ್ಕರೆಯಿಂದ ಹಿಂಡುವ ಸರಿ ಹೊತ್ತಿಗೆ ಮೊದಲು ಎಂಜಲಿಸಿ ನೊರೆಹಾಲನ್ನು ಗುಟುಕಿಸುವ ಯೋಗ ಅರ್ಜುನನಿಗೆ ದೊರಕಿತು. ಹಾಗಾಗಿ ಅವನೇ ಅವುಗಳ ಕರು, ಕರೆದ ನೊರೆ ಹಾಲು ಗೀತೆ. ಅದಕ್ಕೆ ಅಮೃತದ ಹಿರಿಮೆ. ಅದು ಯಾರಿಗೆ ಬೇಡ? 'ತಂಬಿಗಿಯಿಂದ ತುಂಬಿಕೊಂಡು' ಅದನ್ನು ಕುಡಿದು ತೇಗುವ ಭಾಗ್ಯ ಮನಸ್ವೀ ಭಕ್ತರಿಗೆ ಮಾತ್ರ. ಆದ್ದರಿಂದ ಉಳಿದ ಗೀತೆಗಳಿಗಿಂತ ಈ ಗೀತೆ ಪ್ರಭಾವಿ.

ವ್ಯಾಸಭಾರತದ ಭೀಷ್ಮಪರ್ವದಲ್ಲಿ ಬರುವ ಹದಿನೆಂಟು ಅಧ್ಯಾಯಗಳು ಗೀತೆಯ ಶರೀರ. ಏಳು ನೂರು ಶ್ಲೋಕಗಳು ಅದರ ವ್ಯಾಪ್ತಿ. ಭಾರತ ವ್ಯಾಸ ವಾಙ್ಮಯದಲ್ಲಿ ಅರಳಿದ ಕಮಲವಾದರೆ ಗೀತೆ ಅದರ ಪರಾಗ. ಅದು ಎಲ್ಲ ಉಪನಿಷತ್ತುಗಳ ಸಾರ.

ಗೀತೆಯಲ್ಲಿ ವ್ಯಾಕರಣವಿದೆ. ತರ್ಕವಿದೆ. ಮೀಮಾಂಸೆಯಿದೆ, ತತ್ವಶಾಸ್ತ್ರವಿದೆ, ಯೋಗ, ಆಯುರ್ವೇದ, ವಿಜ್ಞಾನ, ಶಿಲ್ಪ, ಅರ್ಥಶಾಸ್ತ್ರ, ನೀತಿಸಂಹಿತೆ ಮೊದಲಾದ ಹಲವು ವಿದ್ಯೆಗಳಿವೆ, ಕಲೆಗಳಿವೆ, ಮಹಾಭಾರತದಲ್ಲಿ ಉಲ್ಲೇಖಿತವಾಗದ ವಿಷಯ ಜಗತ್ತಿನಲ್ಲಿ ಯಾವುದಿದೆ? ಅಂತೆಯೇ ಭಗವದ್ಗೀತೆಯ ಮಾರ್ಗದರ್ಶನಕ್ಕೆ ಪಕ್ಕಾಗದ ವಿದ್ಯಾವಿಭಾಗ ಯಾವುದಿದೆ?

ಇಂದು ನಮ್ಮ ಶ್ರದ್ಧೆ ಶಿಥಿಲವಾಗುತ್ತಿದೆ. ಯಾವುದರಲ್ಲಿಯೂ ನಮಗೆ ಭರವಸೆಯಿಲ್ಲ. ನಾವು ಯಾವುದನ್ನೂ ಆತ್ಯಂತಿಕವಾಗಿ ನಂಬುತ್ತಿಲ್ಲ. ಆದುದರಿಂದ ನಮ್ಮ ಬದುಕು

ಹೋಳಾಗುತ್ತಿದೆ. ನಮ್ಮ ಎಲ್ಲ ಶಕ್ತಿಗಳ ಕೇಂದ್ರ ಹಣ ಮತ್ತು ಮೋಜು. ನಮ್ಮ ಕಸರತ್ತುಗಳ ಮೂಲ ಮೋಸ ಮತ್ತು ಜೂಜು. ಆದ್ದರಿಂದ ಎಲ್ಲರೀತಿಯ ಸಾಮಾಜಿಕ ಸಂಬಂಧಗಳು ಬಿಗಿ ಕಳೆದುಕೊಂಡು ಚೆಲ್ಲಾಪಿಲ್ಲಿಯಾಗಿ ಚೆಲ್ಲಿ ಹೋಗುತ್ತಿವೆ. ಸುಖದ ಆಸೆ ಆಗಸದೆತ್ತರಕ್ಕೆ ಬೆಳೆದಿದ್ದರೂ ಹೆಜ್ಜೆ ಹೆಜ್ಜೆಗೆ ಭಯ ಶೋಕ ಮನಸ್ತಾಪಗಳು ಹೆಚ್ಚುತ್ತಿವೆ. ಆತಂಕದ ಕರಿನೆರಳು ಮಕ್ಕಳು-ಮರಿಗಳೆನ್ನದೇ, ಮುದುಕ-ಯುವಕರೆನ್ನದೆ ಸಕಲರನ್ನು ಆವರಿಸಿಕೊಂಡಿದೆ. ಸರ್ವನಾಶದ ಅಂಚಿಗೆ ಜಗತ್ತು ನಾಗಾಲೋಟದಿಂದ ಧಾವಿಸುತ್ತಿದೆ. ಈಗ ನಮಗೆ, ನಮ್ಮ ಜಗತ್ತಿಗೆ ಇರುವ ಆಲಂಬನ ಭಗವದ್ಗೀತೆ ಮಾತ್ರ

ಗೀತೆಯ ಒಡಲು ಕರುಣೆಯ ಕಡಲು. ಅದಕ್ಕೆ ಭೇದದ ಎಣಿಕೆಯಿಲ್ಲ. ಎಲ್ಲರನ್ನೂ ಕಾಪಾಡುವ ಕಾಳಜಿ ಇದೆ. ದೇಹದಿಂದ ಮೊದಲ್ಗೊಂಡು ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ, ಆತ್ಮದ ವರೆಗೆ ಹಿತವನ್ನು ವ್ಯಷ್ಟಿಯಾಗಿ, ಸಮಷ್ಟಿಯಾಗಿ ದಯಪಾಲಿಸುವ ದಯೆಯಿದೆ. ಗೀತೆ ಸಾರುವ ಯಜ್ಞಭಾವನೆ, ನಿಷ್ಕಾಮಕರ್ಮ, ಸ್ಥಿತಪ್ರಜ್ಞತೆ, ಕರ್ಮ, ಭಕ್ತಿ, ಜ್ಞಾನ ಯೋಗಗಳು, ಸ್ವಧರ್ಮರಕ್ಷಣೆ, ಸ್ವಕರ್ಮಾಭಿರತಿ, ಸಾತ್ವಿಕವಾದ ಆಚಾರ - ವಿಚಾರ, ಆಹಾರ - ವಿಹಾರಗಳು, ನಮ್ಮನ್ನು ಎಂದೆಂದೂ ರಕ್ಷಿಸಬಲ್ಲವು. ಅವು ವಿಶ್ವ ವ್ಯವಸ್ಥೆಯ ಮೂಲ ಸೂತ್ರಗಳು. ಇದನ್ನು ಜಗತ್ತಿಗೆ ನಾವು ಎಂದು ಮನವರಿಕೆ ಮಾಡಿಕೊಡಬಲ್ಲೆವು! ಹೇಗೆ ಸೋದಾಹರಣವಾಗಿ ನಿರೂಪಿಸಬಲ್ಲೆವು !

(ಲೇಖಕರ ಸದಾತನ ಪುಸ್ತಕದಿಂದ)

ಮಣ್ಣಿನ ಆತ್ಮಕಥನ

– ಪ್ರೋ.ಎಂ.ಮಹದೇವಪ್ಪ

ನಾನು ನಿಮಗೆಲ್ಲಾ ಚಿರಪರಿಚಿತ. ಹುಟ್ಟಿದಾಗಿನಿಂದ ಸಾಯುವವರೆಗೂ ಪ್ರತಿದಿನವೂ ಎಲ್ಲರೂ ನನ್ನನ್ನು ನೋಡುತ್ತಲೇ ಇರುತ್ತಾರೆ. ಆದರೂ ನನ್ನನ್ನು ಸರಿಯಾಗಿ ಅರಿತವರು ವಿರಳ. ಹೆಚ್ಚು ಜನ ನನ್ನನ್ನು ನಿರ್ಜೀವಿ ಎಂದು ಭಾವಿಸಿದ್ದಾರೆ. ನನಗೆ ಜೀವವಿಲ್ಲವೆಂದು ತಪ್ಪು ತಿಳಿದಿರುವುದೊಂದೇ ಅಲ್ಲ " ನಿನಗೇನು ಗೊತ್ತು ಮಣ್ಣು, ಮಣ್ಣಂಗಟ್ಟಿ, ಮಣ್ಣು ಮುಕ್ಕ" ಹೀಗೆಂದು ಯಾರನ್ನಾದರೂ ಹೀಯಾಳಿಸುವಾಗ ನನ್ನ ಹೆಸರನ್ನು ಬಳಸಿಕೊಳ್ಳವರು. ನನಗೆ ಜೀವವಿಲ್ಲವೆಂದು ಭಾವಿಸಿ, ನನ್ನನ್ನು ತುಳಿಯುವರು, ಅಪ್ಪಳಿಸುವರು, ಅಗೆಯುವರು, ಕೊಚ್ಚುವರು, ಚುಚ್ಚುವರು, ಉಜ್ಜುವರು, ಜಜ್ಜಿ ನುಚ್ಚುನೂರು ಮಾಡುವರು, ಸುಡುವರು, ನೀರಿಗೆ ಹಾಕಿ ಜಾಲಾಡಿಸುವರು, ಇಟ್ಟಿಗೆಮಾಡಿ ಮನೆ ಕಟ್ಟುವಾಗ ನನ್ನನ್ನು ಬಂಧಿಸಿ ಹತ್ತಾರು, ನೂರಾರು ವರ್ಷ ಒಂದೆಡೆ ಕಟ್ಟಿಹಾಕಿ ಬಿಡುವರು, ಏನೆಲ್ಲಾ ಮಾಡಿವರು ಆದರೂ ನನಗೆ ಸಾವಿಲ್ಲ. ನಾನು ಜೀವಂತವಾಗಿಯೇ ಇದ್ದೇನೆ. ಕಟ್ಟಿಹಾಕಿ ದಶಕ–ಶತಕಗಳಾಗಿದ್ದರೂ ಬಿಡುಗಡೆಯಾದ ನಂತರ ಸಾಯಲು ಬಿಡುವುದಿಲ್ಲ! ಇವರಾರು ಸ್ನೇಹಿತರು ಬಂಧುಗಳು ಎಂದು ಆಶ್ಚರ್ಯವೇ? ಅವರನ್ನು ಪರಿಚಯಿಸಲು ನನಗೆ ಒದಗಿ ಬಂದ ಸುಸಂದರ್ಭವಿದು.

ನನ್ನ ಅರಿತ ನಿಕಟ ಸಂಬಂಧಿಗಳೆಂದರೆ ಸೂರ್ಯ, ಚಂದ್ರ, ಗಾಳಿ, ನೀರು, ಸಾವಯವಾಂಶ ಮತ್ತು ಸಕಲ ಜೀವರಾಶಿ. ಕೊನೆಯದರಲ್ಲಿ (ಜೀವರಾಶಿ) ಮನುಷ್ಯನೂ ಸೇರಿದ್ದಾನೆ. ಜೀವರಾಶಿಗಳ ಪೈಕಿ ಮನುಷ್ಯರನ್ನು ಹೊರತು ಪಡಿಸಿದರೆ, ಮಿಕ್ಕವರೆಲ್ಲಾ ನಿಸ್ವಾರ್ಥಿಗಳು. ನನ್ನಿಂದ ಏನನ್ನೂ ಬಯಸದೆ, ಅವರು ನನಗೆ ಬೇಕಾದುದನ್ನೆಲ್ಲಾ ಕೊಡುವರು. ಸಂಕ್ಷಿಪ್ತ ಅಥವಾ ಸೂಕ್ತವಾಗಿ ಹೇಳುವುದಾದರೆ, ಮನುಷ್ಯನು ನನಗೆ ಕೊಡುವ ಹಿಂಸೆಗೆಲ್ಲಾ ಅವರೇ (ಮಾನವೇತರ ಜೀವಿಗಳು) ಔಷಧಿ. ನನ್ನ ಉಳಿವು, ಅಭಿವೃದ್ಧಿ, ನನ್ನ ಸ್ನೇಹಿತರ ಉತ್ಕ್ರಷ್ಟ ಬೆಳವಣಿಗೆ, ಸಂಖ್ಯಾಭಿವೃದ್ಧಿ ಹೀಗೆ ನನ್ನ ಹಿತಚಿಂತಕರಿಗೆ ಸಹಾಯವಾಗುವ ಸಾವಯವಾಂಶವನ್ನು, ಮನುಷ್ಯ, ತಿಳಿದೋ ತಿಳಿಯದೆಯೋ ಕಬಳಿಸುವ ಹಾದಿ ಹಿಡಿದಾಗ ನಾನೂ ಬಡವಾಗುತ್ತೇನೆ. ಅವನೂ ಬಡವಾಗುತ್ತಾನೆ. ಜಾನುವಾರುಗಳೂ ಬಡವಾಗುತ್ತವೆ. ಜೀವರಾಶಿಗೆ ಸೇರಿದವರೆಲ್ಲಾ ಪರಸ್ಪರ ಅನ್ಯೋನ್ಯವಾಗಿ "ಕೊಡು–ತರುವುದು", ಪ್ರತಿಯೊಬ್ಬರ ಬೇಡಿಕೆಗಳನ್ನು ಆತ್ಮೀಯುತೆಯಿಂದ ಪೂರೈಸುವುದು, ಜೀವಿಗಳು ಪೃಥ್ವಿಯ ಮೇಲೆ ಉದ್ಭವವಾದಾಗಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಈ ಸಂಪ್ರದಾಯದಿಂದ ಹೊರ ಬಂದಿರುವ ಏಕೈಕ ಜೀವಿ ಮನುಷ್ಯ. ಮನುಷ್ಯನ ವಿಷಯ ಇಷ್ಟಕ್ಕಿರಲಿ.

ಏಕೆಂದರೆ ನನ್ನ ಸ್ನೇಹಿತರನ್ನು ಪರಿಚಯಿಸಲು ನನಗೆ ಆತುರ.

ಸೂರ್ಯ:

ನನ್ನ ಸೃಷ್ಟಿ, ಉಳಿವು, ಬೆಳವಣಿಗೆ ನನ್ನ ಜೀವರಾಶಿಗಳ ಸಮೂಹದ ಸಂತಾನಾಭಿವೃದ್ಧಿ ಬೆಳವಣಿಗೆಗೆ ಬೇಕಾದ ಸಮತೋಲ ಉಷ್ಣಾಂಶ, ಅಲ್ಲದೇ ವಿಶೇಷ ಜೀವಿಗಳಿಗೆ ಬೇಕಾದ ಮಟ್ಟದಲ್ಲಿ ಹೆಚ್ಚು, ಕಡಿಮೆ ಉಷ್ಣಾಂಶ ಹೀಗೆ ನನ್ನ ರಶ್ಮಿ ಮತ್ತು ಬೆಳಕನ್ನು ಒದಗಿಸುವ, ನನಗಿಂತಲೂ ಹೆಚ್ಚು ವಯಸ್ಸಾಗಿರುವ, ಕತ್ತಲಲ್ಲಿರುವ ಜಗತ್ತಿಗೆ ಬೆಲಕನ್ನು ಚೆಲ್ಲುವ, ಪೂಜಿಸಲು ಅತ್ಯಂತ ಯೋಗ್ಯವಾದ ಗ್ರಹ ಸೂರ್ಯ. ಹಗಲಾಗಲಿ, ರಾತ್ರಿಯಾಗಲಿ ಒಂದೇ ಸಮನೆ ಇದ್ದರೆ ಅಪಾಯಕಾರಿ ಎಂಬುದನ್ನು ಅರಿತು ಅರ್ಧ ದಿವಸ ಮರೆಯಾಗುತ್ತಾನೆ; ಮತ್ತೆ ಉದಯವಾಗುತ್ತಾನೆ. ಇದೇನಿದು ಪ್ರತಿನಿತ್ಯ ಮೂಡಿ ಮುಳುಗುವ ಈ ದಿನಚರಿಯಿಂದ ಅವನಿಗೆ ಬೇಸರವಿಲ್ಲದೇ ಎಂದು ಕೇಳುವುದನ್ನು ತಪ್ಪಿಸಲು ಮಾರ್ಗಗಳನ್ನು ಹುಡುಕಿದ್ದಾನೆ. ಮೋಡಗಳ ಸಹಾಯದಿಂದ ಅಗಾಗ ಮರೆಯಾಗುವುದು, ಆಗಾಗ ತನಗೂ ಪೃಥ್ವಿಗೂ ಮಧ್ಯ ಚಂದ್ರನನ್ನು ಬರಮಾಡಿಕೊಂಡು, ಜನರು "ಗ್ರಹಣ" ಎಂದು ಕರೆಯುವ ರಮ್ಯನೋಟಕ್ಕೆ ಅವಕಾಶಮಾಡಿ ಕೊಡುತ್ತಾನೆ. ಗ್ರಹಣವು ವಿವಿಧ ಭಂಗಿಯಲ್ಲಿ ಜನರ ಕಣ್ಣಿಗೆ ಹಬ್ಬ ಉಂಟಾಗುವಂತೆ ಬೇರೆ ಬೇರೆ ಬಾಗಗಳಲ್ಲಿ ಬೇರೆ ಬೇರೆ ರೀತಿ ಕಾಣಿಸಿಕೊಂಡು, ಮನಸ್ಸಿಗೆ ಆನಂದ ಉಂಟುಮಾಡಿ ಬೇಸರ ಹೋಗಲಾಡಿಸುತ್ತಾನೆ. ಅಲ್ಲದೆ ಬುದ್ಧಿಜೀವಿಗಳಲ್ಲಿ ಕುತೂಹಲ ಉಂಟುಮಾಡಿ ವೈಜ್ಞಾನಿಕ ಬೆಳವಣಿಗೆಗೆ ಕಾರಣವಾಗುತ್ತಾನೆ. ತನ್ನ ಶಕ್ತಿ ಮತ್ತು ಸಮುದ್ರ ಹಾಗೂ ಎಲ್ಲಡೆ ಇರುವ ನೀರಿನ ಸಹಯೋಗದೊಡನೆ ಮೋಡಗಳನ್ನು ಸೃಷ್ಟಿಸಿ, ಆಗಾಗ ಭೂಮಿಯ ಮೇಲಿರುವ ಜೀವಿಗಳಿಗೆ ನೆರಳು ಸಿಗುವಂತೆ ಮಾಡುವುದಲ್ಲದೆ, ಎಲ್ಲೆಡೆ ಮಳೆ ಬರಿಸಿ, ಭೂಮಿಯನ್ನು ಜಲಭರಿತ ಮಾಡಿಸಿ, ಫಲವತ್ತತೆಯನ್ನು ಹೆಚ್ಚಿಸಿ, ಸಕಲ ಜೀವಿಗಳ ಉಳಿವು ಅಭಿವೃದ್ಧಿಗೆ ನೆರವು ಮಾಡಿಕೊಡುತ್ತಾನೆ. ಅವನ ಇನ್ನೊಂದು ವೈಶಿಷ್ಟ್ಯವೆಂದರೆ, ರಾತ್ರಿಯೆಲ್ಲಾ ಸಂಪೂರ್ಣ ಕತ್ತಲಿದ್ದು, ಅದು ಪ್ರತಿದಿನದ ಪ್ರಕ್ರಿಯೆಯಾಗಿ ಬೇಸರ ತರುವುದು ಬೇಡ ಬಿಸಿಲಿನ ತಾಪವಿಲ್ಲದ ಬೆಳಕನ್ನು ಕೊಡಬಾರದೇಕೆ ಎಂದು ಯೋಚಿಸಿ, ಪ್ರವಾಸಿಗಳಿಗೆ, ಮದು ಮಕ್ಕಳಿಗೆ ಒಂದು ವಿಶೇಷ ವಾತಾವರಣ ನಿರ್ಮಿಸಬೇಕೆಂದು ತನ್ನ ಸ್ನೇಹಿತ ಚಂದ್ರನೊಡನೆ ಒಪ್ಪಂದ ಮಾಡಿಕೊಂಡು ಅವನ ಮೂಲಕ ತನ್ನದೇ ಬೆಳಕಿನ ಮೂಲದ ಬೆಳದಿಂಗಳ ತಂಪನ್ನು ನೀಡುತ್ತಾನೆ. ಬೆಳದಿಂಗಳು ಒಂದೇ ಸಮನಿದ್ದರೆ ಅದರ ಮಹತ್ವ ಕಳೆದುಕೊಳ್ಳುತ್ತದೆ ಎಂದು ಅರಿತು ಬೆಳದಿಂಗಳ ಮಹತ್ವದ ಬಗ್ಗೆ ಅವರಿಗೆ ತಿಳುವಳಿಕೆ ಉಂಟುಮಾಡಲು ಮೋಡಗಳ ಮರೆಯಲ್ಲಿ ಅವಿತುಕೊಳ್ಳಲು ಮೋಡಗಳ ಸಹಾಯ ಪಡೆಯುತ್ತಾನೆ.

ಚಂದ್ರ ಮತ್ತು ನಕ್ಷತ್ರಗಳು

ನನ್ನ ಮತ್ತೊಬ್ಬ ಸ್ನೇಹಿತ ಚಂದ್ರನ ಬಗ್ಗೆ ಆಗಲೇ ಸ್ವಲ್ಪ ತಿಳಿಸಿದ್ದೇನೆ. ಒಂಟಿಯಾಗಿ ಮಾಡಲಗದುದ್ದನ್ನು ಸಹಭಾಗಿತ್ವದಲ್ಲಿ ಮಾಡಬಹುದು ಎಂಬುದನ್ನು ಸೂರ್ಯ ಚಂದ್ರರು

ಜೀವಕೋಟಿಗೆ ತಿಳಿಸಿಕೊಟ್ಟಿದ್ದಾರೆ.

ನಮ್ಮ ಸಂಬಂಧವನ್ನು ಮೆಚ್ಚಿದ ನಕ್ಷತ್ರಗಳು " ನಾವೂ ನಿಮ್ಮೊಡನಿದ್ದೇವೆ' ಎಂದು ಮಿರು ಮಿರು ಮಿನುಗುತ್ತಾ, ಹೊಳೆಯಯುತ್ತಾ ಜೀವಕೋಟಿಯ ಕಣ್ಣುಗಳಿಗೆ ಮನಸ್ಸಿಗೆ ತಂಪೆರೆಯುತ್ತವೆ. ಒಮ್ಮೊಮ್ಮೆ ಭೂಮಿಗೆ ಬಿದ್ದು ಮನುಷ್ಯನನ್ನು ಅಥವಾ ಅವನ ಆಸ್ತಿಪಾಸ್ತಿಯನ್ನು ಸುಟ್ಟುಬಿಡುವುದೇನೋ ಎನ್ನುವ ಭಯ ಉಂಟುಮಾಡಿ, ಹಾಗೆ ಮಾಡದೆ ಮಾಯವಾಗಿ ಬಿಡುತ್ತವೆ. ತಮ್ಮನ್ನು ನೋಡಲು " ಟಿಕೆಟ್ ತೆಗೆದುಕೊಳ್ಳಿ" ಎಂದು ಅವು ಕೇಳುವುದಿಲ್ಲ. ನಕ್ಷತ್ರಗಳು ಒಂದೇ ಸಮನೆ ಕಾಣಿಸಿಕೊಂಡರೆ ಮಹತ್ವ ಕಡಿಮೆಯಾಗುತ್ತದೆ ಅಲ್ಲವೇ? ಆದ್ದರಿಂದಲೇ ಆಗಾಗ ಅವು ಮೋಡಕ್ಕೆ ಮೊರೆ ಹೋಗಿ ಕಣ್ಣಿಗೆ ಕಾಣಿಸದಂತೆ ಇರುತ್ತವೆ. ಅಷ್ಟೊಂದು ಸಂಖ್ಯೆಯಲ್ಲಿದ್ದರೂ ಅವು ಜಗಳ ಮಾಡುವುದಿಲ್ಲ ಮತ್ತು ಸ್ಥಳ ಬದಲಾಯಿಸುವುದಿಲ್ಲ– ರಾಜಕಾರಣಿಗಳಂತೆ! "ಧ್ರುವ" ತಾರೆಯೊಡಗೂಡಿ ಮನುಷ್ಯನಿಗೆ ದಿಕ್ಕು ತೋರಿಸುವ ಅವಿರತ ಮಾರ್ಗದರ್ಶಿಗಳಾಗಿವೆ.

ಗಾಳಿ

ಗಾಳಿಯೇ ಎಲ್ಲಾ ಜೀವಿಗಳಿಗೂ ಪ್ರಾಣ. ಇಲ್ಲದಿದ್ದರೆ, ಅಲ್ಲಲ್ಲಿ ಉದ್ಭವಿಸಿದ ತ್ಯಾಜ್ಯ, ಕೊಳೆ, ಇತ್ಯಾದಿ ಬೇಡವಾದ ಹಾಗೂ ಬೇಕಾದ ವಸ್ತುಗಳು ಒಂದೆಡೆಯೇ ಇದ್ದು ಮಾರಕವಾಗುತ್ತದೆ. ಗಾಳಿ ಉಷ್ಣಾಂಶವನ್ನು ಒಂದು ಹದಕ್ಕೆ ತರುತ್ತದೆ. ಸಕಲ ಜೀವಿಗಳ ಚಲನೆಗೂ ವಾಹನವಾಗುತ್ತದೆ. ಸಕಲ ಜೀವಿಗಳ ಉಸಿರು ಗಾಳಿ, ಅಂದರೆ ಪ್ರಾಣ. ಗಾಳಿತ ಅತ್ಯಂತ ಮಹತ್ವದ ಕಾರ್ಯ ಮತ್ತೊಂದಿದೆ. ಪರಾಗಸ್ಪರ್ಶ ಕ್ರಿಯೆಗೆ ನೆರವಾಗುವುದು. ಬೀಜ ಪ್ರಸಾರಕ್ಕೆ ನೆರವಾಗುವುದು, ವಾತಾವರಣದ ಉಷ್ಣಾಂಶ ಮತ್ತು ತೇವಾಂಶಗಳ ಸಮತೋಲನೆಯನ್ನು ಕಾಪಾಡುವುದು, ಪರಿಸರವನ್ನು ಸ್ವಚ್ಛವಾಗಿಡುವುದು, ಹೀಗೆ ಅನೇಕ. ಸದಾ ಸಂಚಾಲನೆಯಲ್ಲಿರುವ ಗಾಳಿ, ಮಾನವನು ಸದಾ ಕ್ರಿಯಾಶೀಲನಾಗಿರಬೇಕೆಂಬುದಕ್ಕೆ ಸಾಕ್ಷಿಯಾಗಿದೆ.

ನೀರು

ನನ್ನ ಸ್ನೇಹಿತ ನೀರಿಲ್ಲದಿದ್ದರೆ ಯಾರೂ ಇಲ್ಲ. ನಾನೂ ಸಹ ನೀರಿಲ್ಲದಿದ್ದರೆ ಬಂಜೆಯಾಗಿ ಬಿಡುತ್ತೇನೆ. ನನಗೆ ಗಂಗೆ ಎಲ್ಲದ್ದಕ್ಕಿಂತ ಹತ್ತಿರದವಳು. ಅವಳನ್ನು ನಾನು ಶೇಖರಿಸಿ ಸಮುದ್ರ, ಸಾಗರ ಕೊಲ್ಲಿಗಳನ್ನು ಮಾಡುತ್ತೇನೆ. ಕೆರೆ, ಕಟ್ಟೆ, ಬಾವಿ ಎಲ್ಲಾ ತರಹದ ಸಣ್ಣ ಪ್ರಮಾಣದ ನೀರಿನ ಉಗ್ರಾಣಗಳನ್ನೂ ಸಹ ಸೃಷ್ಟಿಸುತ್ತೇನೆ. ಗಂಗೆ ಜೊತೆ ಸೇರಿ ನಾನು ಯಾವ ಅವತಾರವನ್ನಾದರೂ ತಾಳಬಲ್ಲೆ. ನನ್ನನ್ನು ಉಪಯೋಗಿಸಿ ಎಲ್ಲಾ ರೂಪದ ದೇವತೆಗಳನ್ನು ಮೂಡಿಸುತ್ತಾರೆ. ಎಲ್ಲಾ ಬೆಳೆಗಳನ್ನು ಬೆಳೆಯುತ್ತಾರೆ. ನನ್ನನ್ನು ಕಾಯಿಸಿ ಎಲ್ಲಾ ಕೆಲಸಗಳಿಗೂ ಉಪಯೋಗಿಸುತ್ತಾರೆ. 'ಮಡಕೆ ಮಾಡುವವನಿಗೆ ಮಣ್ಣೇ ಮೊದಲು' ಎಂದಿದ್ದಾರೆ ಶರಣರು. ಮನುಷ್ಯ, ಪ್ರಾಣಿಗಳು, ಸಸ್ಯಗಳು. ಸೂಕ್ಷ್ಮ ಜೀವಾಣುಗಳು ಇವರೆಲ್ಲಾ ನನ್ನ ಮಕ್ಕಳು. ಮನುಷ್ಯರು

ಅತ್ಯಂತ ಸ್ವಾರ್ಥಿ ಮಕ್ಕಳು. ಅದರೇನಂತೆ, ಮಕ್ಕಳು ಮಕ್ಕಳೇ ಅಲ್ಲವೇ? ಅವರಿಗೆ ಬೇಕಾದದ್ದನ್ನೆಲ್ಲಾ ಒದಗಿಸುವ ಸೌಕರ್ಯ– ಸೌಲಭ್ಯಗಳ ಕೊರತೆ ಉಂಡುಮಾಡಿಲ್ಲ. ಆದರೆ ಅವರಲ್ಲಿ (ಕೆಲವರು) ತಮ್ಮ ಸ್ವಾರ್ಥಕ್ಕಾಗಿ ನಾನು ಒದಗಿಸುವ ಸೌಲಭ್ಯಗಳನ್ನು ಕಬಳಿಸಿ, ಗೌಪ್ಯವಾಗಿಟ್ಟು, ಇತರೇ ನನ್ನ ಮುಗ್ಧ ಮಕ್ಕಳಿಗೆ ತೊಂದರೆ ಉಂಟುಮಾಡುತ್ತಾರೆ. ಎಲ್ಲರೂ ನನ್ನನ್ನು ಕಾಪಾಡುತ್ತಾರೆ. ಪರಸ್ಪರ ಸಹಕಾರದಿಂದ ಜೀವಿಸುತ್ತಾರೆ. ಮಾನವನನ್ನು ಹೊರತು ಪಡಿಸಿ! ಅಂತರ್ಜಲವಾಗಿ ಅವಳು ಇಲ್ಲದಿದ್ದರೆ ಏನೂ ನಡೆಯದು. ಯಾವುದೇ ಜೀವಿ ಜೀವಂತವಾಗಿರಲಾರದು ಅವಳ ಮಹತ್ವವನ್ನು ಸರಿಯಾಗಿ ತಿಳಿಯದೆ ಅವಳನ್ನು ಪಾತಾಳಕ್ಕೆ ಕಳುಹಿಸಿರುವುದು ದುರ್ದೈವ. ಅವಳನ್ನು ವೈಜ್ಞಾನಿಕವಾಗಿ ಬುದ್ಧಿವಂತಿಕೆಯಿಂದ ಪಾತಾಳದಿಂದ ಮೇಲೆ ಬರಿಸಿಕೊಂಡರೆ ಜೀವನ ಸುಗಮವಾದೀತು.

ಗರಿಕೆ

ನನ್ನ ರಕ್ಷಾಕವಚ ಭೂಮಿಯ ಮೇಲಿನ ಅಸಂಖ್ಯಾತ ಸಸ್ಯಗಳು. ಅವುಗಳನ್ನು ಹೆಸರಿಸುವುದಾದರೆ, ಅವುಗಳ ಪೈಕಿ ಮೊದಲನೆಯದು ಗರಿಕೆ ಹುಲ್ಲು. ಈ ಸಸ್ಯಕ್ಕೆ ಹರಿಯಾಲಿ, ದರ್ಬೆ ಹುಲ್ಲು, ಹೀಗೆ ಹೆಸರು ಆನೇಕ. ನನ್ನ ಕವಚವಾಗಿ ಅಷ್ಟೊಂದು ಸಸ್ಯಗಳಿಲ್ಲದಿದ್ದರೆ ಮಳೆ ಬಿದ್ದ ಕೂಡಲೇ ನಾನು ಕೊಚ್ಚಿಹೋಗಿಬಿಡುತ್ತೇನೆ. ನನ್ನ ಸವಕಳಿ ತಪ್ಪಿಸುವುದರಲ್ಲಿ ಹುಲ್ಲಿನ ಪಾತ್ರ ಬಹಳ ಮಹತ್ತರವಾದುದು. ಪರಿಸರ ಮತ್ತು ಫಲವತ್ತತೆ ಕಾಪಾಡುವಲ್ಲಿ ಹುಲ್ಲಿನ ಮಹತ್ವ ಅರಿತವರು ಅಪರೂಪ. ರಸ್ತೆ ಆಸುಪಾಸುಗಳಲ್ಲಿ ಪಟ್ಟಣಗಳಲ್ಲಿ ಪರಿಸರ ಶುದ್ಧೀಕರಿಸುವ ನೆಪದಲ್ಲಿ ಹುಲ್ಲನ್ನು ಕೆತ್ತಿ ಬಿಸಾಡುವರು. ಇದರಿಂದ ನಾನು ನೀರಿನ ಜೊತೆ ಕೊಚ್ಚಿ ಹೋಗುವುದಲ್ಲದೆ ಗಾಳಿಯಲ್ಲಿ ತೂರಿ ಹೋಗುವೆ. ನನ್ನ ಫಲವತ್ತತೆ ಕುಗ್ಗುವುದು. ಹೀಗೆ ಮಾಡುವುದು ಅವೈಜ್ಞಾನಿಕ. ಬೇರೆ ಸಸ್ಯಗಳನ್ನು ತೆಗೆಯಬೇಕಾದರೂ ಹುಲ್ಲನ್ನು ಮುಟ್ಟಬಾರದು ಎನ್ನುವ ಅರಿವು ಮೂಡಿಸುವವರ ಕೊರತೆಯೇ ಇದಕ್ಕೆ ಕಾರಣ. ಇನ್ನೂ ಮೇಲಾದರೂ ಇದರ ಬಗ್ಗೆ ಅಂದರೆ ಹುಲ್ಲಿನ ಮಹತ್ವದ ಬಗ್ಗೆ ತಿಳುವಳಿಕೆ ನೀಡುವ ಕಸರತ್ತು ನಡೆಸಿ ನನ್ನನ್ನು ಬೋಳುಮಾಡುವ ಕೆಲಸ ನಿಲ್ಲಿಸಿದರೆ ಸಾರ್ಥಕವಾದೀತು. ನನ್ನ ಮೇಲೆ ಹುಲ್ಲು ಬೆಳೆದು ಹಚ್ಚ ಹಸಿರು "ಕಾರ್ಪೆಟ್" ತರಹ ಕಾಣಿಸುವುದು ಯಾರಿಗೆ ತಾನೆ ಇಷ್ಟವಾಗುವುದಿಲ್ಲ ಅಷ್ಟೇ ಅಲ್ಲ. ಹುಲ್ಲು ಮತ್ತು ಔಷಧಿಗೂ ಸಲ್ಲುವೆವು ಮತ್ತು ಪೂಜೆಗೂ ಸಲ್ಲುವೆವು. ಇದನ್ನೆಲ್ಲ ಅರಿತು ಎಲ್ಲರೂ ಕೂಡಿ ಬಾಳುವ ಸಂಸ್ಕೃತಿ ಬೆಳೆಸಿದರೆ ಸರ್ವರಿಗೂ ಆನಂದ ನನಗೂ ಆನಂದ ಮತ್ತು ಹುಲ್ಲಿಗೂ ಆನಂದ.

ಸಾವಯವಾಂಶ

ನನ್ನ ಇನ್ನೊಬ್ಬ ಅಪ್ತ ಸ್ನೇಹಿತ ಸಾವಯವಾಂಶ. ಅವನ ಹೆಸರು "ಹ್ಯೂಮಸ್". ಅವನ ಮಹತ್ವ ತಿಳಿದವರು ಅಪರೂಪ. ಅವನ ಪಾತ್ರ ಅರಿಯದವರು ಅವನನ್ನು ಸರಿಯಾಗಿ ಗಮನಿಸದೆ ಅವನಿಂದ ಪಡೆಯಬಹುದಾದ ಲಾಭವನ್ನು ಕಳೆದುಕೊಂಡು ನಷ್ಟ ಅನುಭವಿಸುವರು. ಅವನನ್ನು ಉಳಿಸಿ ಬೆಳೆಸುವುದು ಬಹಳ ಸುಲಭ. ಅವನೊಡನೆ

ಸದಾ ಸಾವಿರಾರು ಸೂಕ್ಷ್ಮ ಜೀವಿಗಳು ಗುಂಪಾಗಿ ಒಟ್ಟಿಗೇ ಬೆಳೆದು ನನಗೆ ಫಲವತ್ತತೆಯನ್ನು ನೀಡುವರು; ಅಂದರೆ ನನ್ನನ್ನು ಸಂಪದ್ಭರಿತನಾಗಿ ಮಾಡುವನು.

ನನ್ನ ಸಂತಾನ

ನಾನು ಸಂತಾನಪ್ರಿಯೆ. ನನ್ನ ಸಂತಾನ ಎಣಿಸಲಾಗದಷ್ಟಿದೆಯಲ್ಲದೆ, ವಿಸ್ಮಯಕಾರಿ ಎಂದು ಹೇಳುವಷ್ಟು ವೈವಿಧ್ಯಮಯ. ಕಣ್ಣಿಗೆ ಕಾಣಿಸದ ಸೂಕ್ಷ್ಮಾಣು ಜೀವಿ (ವೈರಸ್) ಗಳಿಂದ ಹಿಡಿದು, ಆನೆಯಂತಹ ಗಾತ್ರವುಳ್ಳ ಪ್ರಾಣಿಗಳವರೆಗೂ, ಕಣ್ಣಿಗೆ ಕಾಣಿಸುವ ಹಾಗೂ ಕಾಣಿಸದ ಜೀವಿಗಳೆಲ್ಲಾ ನನ್ನ ಸಂತಾನವೇ! ನನ್ನ ಸಂತಾನ ಸಮೂಹದಲ್ಲಿ ಅಪಾಯಕಾರಿ ಜೀವಿಗಳೂ ಇದ್ದಾರೆ! ಅವುಗಳ ಪೈಕಿ ಮನುಷ್ಯನೇ ಮೊದಲನೆಯವನು. ಆ ನಂತರ ಕೆಲವು ಸಸ್ಯಗಳು– ಲಾಂಟನ, ಪ್ರೋಸೋಫಿಸ್, ಯುಪಟೋರಿಯಂ, ಅಜರೇಟಂ ಮುಂತಾದವು ಸುಮಾರು ವರ್ಷಗಳಿಂದ ಇವೆ. ಸುಮಾರು ೫ ದಶಕಗಳ ಹಿಂದೆ ಲ್ಯಾಟಿನ್ ಅಮೇರಿಕಾದಿಂದ ನಮ್ಮ ನಾಡಿಗೆ ಕಾಲಿಟ್ಟ ಹೆಚ್ಚು ಆಕ್ರಮಣಕಾರಿ ಹಾಗೂ ಅಪಾಯಕಾರಿ ಕಳೆ ಪಾರ್ಥೇನಿಯಂ. ಒಂದೇ ಸಸ್ಯದಿಂದ ೧೫೦೦೦ ದವರೆಗೂ ಬೀಜ ಉತ್ಪಾದಿಸಬಲ್ಲ ಈ ಕಳೆ ತನ್ನ ರಸವನ್ನು ಮಣ್ಣಿಗೆ ಸೇರಿಸಿ ಇತರೇ ಯಾವುದೆ ಸಸ್ಯವೂ ಮೊಳೆತು ಬೆಳೆಯದಂತೆ ಮಾಡಿ, ತನ್ನದೇ ಪ್ರಭುತ್ವವನ್ನು ಸಾಧಿದುವುದಲ್ಲದೆ, ಜನಜಾನುವಾರುಗಳಿಗೆ ಅಲರ್ಜಿ ಉಂಟುಮಾಡಿ, ವಿವಿಧ ವ್ಯಾದಿಗಳಿಗೆ ಮೂಲವಾಗಿ, ವಿನಾಶಕಾರಿ "ಕಾಂಗ್ರೆಸ್ ಹುಲ್ಲು" ಎಂದೇ ಹೆಸರುವಾಸಿಯಾಗಿದೆ. ಈ ಖದೀಮನನ್ನು ಹತೋಟಿಯಲ್ಲಿಡಬೇಕೆಂದೇ ಕೆಲವು ಶತ್ರು ಸಸ್ಯಗಳು ನನ್ನ ಸಂತಾನದ ಸಾಲಿನಲ್ಲಿರುವುದು ಸಮಾಧಾನ ಉಂಟುಮಾಡಿದೆ. ಅದರೇನಂತೆ, ಇದನ್ನು ತಿಳಿಯುವ ಗೋಜಿಗೆ ಹೋಗದೆ ಮನುಷ್ಯ ಇಂತಹ ಸಸ್ಯ ಶತ್ರುಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಬಿಸಾಡಿ ಪಾರ್ಥೇನಿಯಂ ಬೆಳೆಯಲು ಅವಕಾಶ ಕಲ್ಪಿಸುತ್ತಾ ಇದ್ದಾನೆ. ನನ್ನ ಮಕ್ಕಳೆಲ್ಲರೂ ಚೆನ್ನಾಗಿ ಬಾಳಿ ಬದುಕಬೇಕೆಂಬುದೇ ನನ್ನ ಮಹದಾಸೆ ಎಲ್ಲ ತಾಯಿಯರಂತೆ.

ನನ್ನ ಆರೋಗ್ಯ

ನಾನು ಜೀವಂತ ಎಂದ ಮೇಲೆ ಎಲ್ಲರಂತೆ ನನಗೂ ಅರೋಗ್ಯ ಕೆಡುವುದು ಸಹಜವಲ್ಲವೆ? ಮನುಷ್ಯನ ದುರಾಸೆ ಹಾಗೂ ಅವೈಜ್ಞಾನಿಕ ಪದ್ಧತಿಗಳಿಂದಾಗಿ ಮನುಷ್ಯನ ಮಿತಿಮೀರಿದ ರಸವಸ್ತುಗಳ ಬಳಕೆಯಿಂದ ಪೋಷಕಾಂಶಗಳ ಸಾರ ಮತ್ತು ಕೊರತೆ ಎರಡೂ ನನ್ನನ್ನು ಕಾಡಿಸುವಷ್ಟು ಸನ್ನಿವೇಶಗಳು ಇತ್ತೀಚೆಗಷ್ಟೇ ಸೃಷ್ಟಿಯಾಗಿರುವುದು ನನಗೆ ಆತಂಕ ಉಂಟುಮಾಡಿದಡ. ಇದೀಗ ಅಲ್ಲಲ್ಲಿ ನನ್ನ ಸ್ಥಿತಿಯನ್ನು ಅರಿತು ನನ್ನನ್ನು ಪರೀಕ್ಷಿಸುವ ಪದ್ಧತಿ ಅನುಕರಣೆಯಾಗುತ್ತಿರುವುದು ನನಗೆ ಸಂತಸ ಉಂಟುಮಾಡಿದೆ. ನನ್ನನು ಪ್ರಯೋಗಾಲಯಗಳಲ್ಲಿ ಪರೀಕ್ಷೆಗೊಳಪಡಿಸಿ ನನ್ನಲ್ಲಿರುವ ಕೊರತೆ, ದೋಷ ಮುಂತಾದವುಗಳನ್ನರಿತು ಪೋಷಿಸಲಾಗುತ್ತಿರುವುದು ಸಮಾಧಾನ ತಂದಿದೆ. ಸದ್ಯಕ್ಕೆ ಅಂತಹವರು ಬೆರಳೆಣಿಸುವಷ್ಟು, ನನ್ನ ಆರೋಗ್ಯವನ್ನು ತೃಪ್ತಿಕರವಾಗಿಡಲು

೧೬ ಪೋಷಕಾಂಶಗಳು ಅವಶ್ಯಕ. ನನ ವಿವಿಧ ಸಂತಾನಗಳಿಗೆ ಬೇಕಾಗಿರುವ ಪ್ರಮಾಣ ಬೇರೆ ಬೇರೆಯಾದ್ದರಿಂದ ಪೋಷಕಾಂಶಗಳನ್ನು ವೈಜ್ಞಾನಿಕವಾಗಿ ಪೂರೈಸುವುದು ಬಹಳ ಮುಖ್ಯ. ನನ್ನ ಆತ್ಮ ಸ್ನೇಹಿತ ಸಾವಯವಾಂಶದ ಮಹತ್ವದ ಬಗ್ಗೆ ಈಗಾಗಲೇ ಪರಿಚಯಿಸಿದ್ದೇನೆ. ನನ್ನಲ್ಲಿರುವ ಕೊರತೆಯನ್ನು ನನ್ನ ಸಂತಾನಗಳ ಮೈಬಣ್ಣ ಮತ್ತು ಬೆಳವಣಿಗೆಯ ವೇಗದಿಂದ ಸುಲಭವಾಗಿ ಗುರುತಿಸಬಹುದು. ನನ್ನ ಆರೋಗ್ಯದ ಕಡೆ ಗಮನವಿಟ್ಟು ನನ್ನನ್ನು ಸದೃಡವಾಗಿರುವಂತೆ ನೋಡಿಕೊಂಡವರಿಗೆ ನಾನು ತೃಪ್ತಿಕರವಾದ ಇಳುವರಿ ಪಡೆದು ಲಾಭದಾಯಕ ಫಸಲು ತೆಗೆಯಲು ನೆರವಾಗುತ್ತೇನೆ. ನನ್ನ ಖಾಯಿಲೆಯನ್ನು ತಿಳಿಯಬಲ್ಲ ಪ್ರಯೋಗಾಲಯಗಳು ಕೃಷಿ ವಿಜ್ಞಾನ ಕೇಂದ್ರಗಳ, ಕೃಷಿವಿಶ್ವವಿದ್ಯಾನಿಲಯಗಳ ಹಾಗೂ ಸರ್ಕಾರಿ ಕೃಷಿ ಇಲಾಖೆಗಳ ಆಶ್ರಯದಲ್ಲಿರುವುದನ್ನು ಗಮನಿಸಿ, ನನ್ನನ್ನು ಪೋಷಿಸಲಿಚ್ಚಿಸುವವರು ನನ್ನ ಯೋಗಕ್ಷೇಮ ನೋಡಿಕೊಂಡರೆ ಹಾಗೂ ಪ್ರಸಾರ ಮಾಧ್ಯಮದವರು ನನ್ನ ಕಡೆ ಇನ್ನಷ್ಟು ಗಮನ ಹರಿಸಿ ಸಹಕರಿಸಿದರೆ ನಾನೇ ಧನ್ಯಳು.

ಒಂದು ಕೋರಿಕೆ

ನನ್ನ ಈ ಕೋರಿಕೆಯನ್ನು ನೀವು ಊಹಿಸಲಾರಿರಿ. ನನ್ನ ಬಗ್ಗೆ ತಿಳಿಯಬಯಸುವವರಿಗೆ ಸರಿಯಾದ ಪುಸ್ತಕಗಳಿಲ್ಲ. ಪ್ರಸಾರ ಮಾಧ್ಯಮಗಳು ನನ್ನನ್ನು ನಿರ್ಲಕ್ಷಿಸುವೆ. ಮಕ್ಕಳೇ ಆಗಲಿ. ಯಾವ ವಯಸ್ಸಿನವರೇ ಆಗಲಿ, ಸಿನಿಮಾ ನಟನಟಿಯರ ಬಗ್ಗೆ, ಕ್ರಿಕೆಟ್ ಪಟುಗಳ ಬಗ್ಗೆ ತಿಳಿದುಕೊಂಡಿರುವಷ್ಟು ನನ್ನ ಬಗ್ಗೆ ತಿಳಿದುಕೊಂಡಿಲ್ಲ. ನಮ್ಮ ನಾಡಿನ ಪಠ್ಯ ಪುಸ್ತಕಗಳಲ್ಲಂತೂ ನಾನು ಕಾಣಿಸುವುದೇ ಅಪರೂಪ. ನನ್ನ ಸ್ನೇಹಿತರಾದ ಪರಿಸರ ಮತ್ತು ನನ್ನ ಸಂತಾನದ ಬಗ್ಗೆಯೂ ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಪುಸ್ತಕ ಮತ್ತು ಪಠ್ಯಕ್ರಮಗಳು ನೀಡಿತ್ತಿಲ್ಲ. ಅದಕ್ಕಾಗಿ ಸಾಕಷ್ಟು ಗಮನ ನೀಡದಿರುವ ಸರ್ಕಾರದ ಮೇಲೆ ನನಗೆ ಅತೃಪ್ತಿ ಮತ್ತು ಬೇಸರವಿದೆ.

ಸಾಭಾರ: ಲೀಸಾ ಇಂಡಿಯ

ನಾಲ್ಕೂ ದಿಕ್ಕಿನಿಂದ....

ಆತ್ಮಹತ್ಯೆ

ಡಾ.ಕಲ್ಬುರ್ಗಿ ಅವರ ಹತ್ಯೆ ಬಗ್ಗೆ ನನಗೂ ಬೇಸರವಿದೆ. ಆದರೆ ಎಂಟುನೂರಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆಮಾಡಿಕೊಂಡಾಗ ಪ್ರತಿಕ್ರಿಯೆ ತೋರದ ವಿಚಾರವಂತರು, ಬುದ್ಧಿಜೀವಿಗಳು ಡಾ.ಕಲ್ಬುರ್ಗಿರವರ ಹತ್ಯೆ ವಿಷಯದಲ್ಲಿ ತೋರುವ ಪ್ರತಿಕ್ರಿಯೆಯ ಅಬ್ಬರವೇನು? ಪ್ರಶಸ್ತಿ ಪುರಸ್ಕಾರ ಹಿಂತಿರುಗಿಸಿ ಪ್ರತಿಭಟಿಸುವುದೇನು? ಇಲ್ಲಿ ನನ್ನ ಮೂಲಭೂತ ಪ್ರಶ್ನೆಯೆಂದರೆ ಸಾಹಿತಿಗಳ, ವಿಚಾರವಾದಿಗಳ ಹತ್ಯೆ ಮಾತ್ರ ಪ್ರತಿಕ್ರಿಯೆಗೆ ಅರ್ಹವೇ? ಅನ್ನ ನೀಡುವ ರೈತರ ಜೀವಕ್ಕೆ ಬೆಲೆ ಇಲ್ಲವೇ?

– ಶರತ್ ಕಲ್‌ಕೋಡ್

*****

ಗುಬ್ಬಚ್ಚಿ

ಮನೆ ಅಂಗಳದಲ್ಲಿ ನೋಡಿದರೆ ಕಾಣಿಸುತ್ತಿದ್ದ ಗುಬ್ಬಚ್ಚಿಗಳು ಅಳಿವಿನಂಚಿಗೆ ತಲುಪುತ್ತಿರುವುದು ಮನುಕುಲ ತಲೆ ತಗ್ಗಿಸುವಂತೆ ಮಾಡಿದೆ. ಅವುಗಳ ಸಂಖ್ಯೆ ಕಡಿಮೆ ಮಾಡಲು ನೆಲೆ ನಾಶವೇ ಮೂಲ ಕಾರಣ. ಮೊಬೈಲ್ ಗೋಪುರ ಹೊರ ಸೂಸುವ ವಿದ್ಯುತ್ ಕಾಂತೀಯ ಕಿರಣಗಳು ಅವುಗಳ ಬದುಕಿನಲ್ಲಿ ತಲ್ಲಣ ಸೃಷ್ಟಿಸಿವೆ. ಗೋಪುರಗಳಿಂದ ಆಗುವ ದುಷ್ಪರಿಣಾಮ ಕುರಿತಾದ ಅಧ್ಯಯನಕ್ಕೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ೨೦೧೦ರ ಅಕ್ಟೋಬರ್ ೩೦ರಂದು ತಜ್ಞರ ಸಮಿತಿ ರಚಿಸಿತ್ತು. ವಿದ್ಯುತ್ ಕಾಂತೀಯ ಕಿರಣಗಳಿಂದ ಗುಬ್ಬಚ್ಚಿಗಳ ಸಂತಾನೋತ್ಪತ್ತಿ ಶಕ್ತಿ ಕುಗ್ಗುತ್ತಿರುವ ಬಗ್ಗೆ ಸಮಿತಿಯ ವರದಿ ಬೆಳಕು ಚೆಲ್ಲುತ್ತಿದೆ.

– ಕೆ.ಎಚ್.ಓಬಳೇಶ್

*****

ಅಪೂರ್ಣ ಜ್ಞಾನ

ಇಂದು ವಿಜ್ಞಾನವನ್ನು ಮಹಾಜ್ಞಾನವೆಂದಾಗಲೀ, ಆಧ್ಯಾತ್ಮಿಕ ಜ್ಞಾನವೆಂದಾಗಲೀ ನೋಡುವ ಕ್ರಮವೇ ಪ್ರಶ್ನಾರ್ಹವೆನಿಸಿದೆ. ನಾವು ಹೆಮ್ಮೆಪಟ್ಟುಕೊಂಡ ವಿಜ್ಞಾನ ಏನಿದ್ದರೂ ವಿ–ಜ್ಞಾನ! ಅಂದರೆ ವಿಗ್ರಹ ಜ್ಞಾನ! ಎಲ್ಲವನ್ನು ಒಡೆದು ನೋಡುವ ಜ್ಞಾನ. ಅಂದರೆ ಎಲ್ಲವನ್ನು ಒಡೆದು ನೋಡುವ ಮತ್ತು ವಿಶ್ಲೇಷಿಸಿ ನೋಡುವ ಒಂದು ಜ್ಞಾನ ಸೃಷ್ಟಿ ಹೊರತು ವಸ್ತು ಅಥವಾ ವಿದ್ಯಮಾನವನ್ನು ಅದು ಇರುವ ಅಖಂಡ ಸ್ಥಿತಿಯಲ್ಲಿ ಅರಿಯಲಾಗದ ಜ್ಞಾನ, ಹಾಗಾಗಿ ಅದು ಅಪೂರ್ಣ ಜ್ಞಾನ.

– ಡಿ.ಎಸ್.ನಾಗಭೂಷಣ್

ಸಂವಿಧಾನ ಮತ್ತು ಕನ್ನಡಿಗ

"ಭಾರತದ ಸಂವಿಧಾನ : ರಾಷ್ಟ್ರದ ಅಡಿಗಲ್ಲು" ಎಂಬ ಕೃತಿಯ ಅಮೇರಿಕಾದ ಇತಿಹಾಸ ತಜ್ಞ ಗ್ರಾನ್‌ವಿಲ್ ಅಸ್ಟಿನ್ ರವರು ಸಂವಿಧಾನ ರಚನೆಗೆ ಮುಖ್ಯ ಕೊಡುಗೆ ನೀಡಿದ ೨೧ ಜನರನ್ನು ಗುರುತಿಸುತ್ತಾರೆ. ಅವರಲ್ಲಿ ಮುಖ್ಯವಾಗಿ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಬೆನಗಲ್ ನರಸಿಂಗರಾವ್ ಮತ್ತು ಕೆ.ಎಮ್.ಮುನ್ಷಿ ಸಂವಿಧಾನ ರಚನೆಯಲ್ಲಿ ಬಹುಮುಖ್ಯ ಪಾತ್ರವಹಿಸಿದವರು. ಸಭೆಯ ಅಧ್ಯಕ್ಷರಾಗಿದ್ದ ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದ್ ತಮ್ಮ "ಭಾರತದ ಸಂವಿಧಾನ ರಚನಾ ಕ್ರಿಯಾ" ಕೃತಿಗೆ ಮುನ್ನುಡಿ ಬರೆಯುತ್ತಾ "ಡಾಕ್ಟರ್ ಬಿ.ಆರ್.ಅಂಬೇಡ್ಕರ್" ಸಂವಿಧಾನದ ಕುಶಲ ಪ್ರೇರಕವಾಗಿದ್ದರೆ ಸರ್.ಬಿ.ಎನ್.ರಾವ್ ಯೋಜನೆಯನ್ನು ಕಲ್ಪಿಸಿದವರು ಮತ್ತು ತಳಪಾಯ ಹಾಕಿದವರು ಎಂದಿದ್ದಾರೆ. ನನಗೆ ಸಂದ ಕೀರ್ತಿಯು ದೊಡ್ಡ ಪಾಲು ಬಿ.ಎನ್.ರಾವ್ ಅವರಿಗೆ ಸಲ್ಲಬೇಕು ಎಂಬ ಅಂಬೇಡ್ಕರ್‌ರ ಮಾತು ಲೋಕ ಸಭೆಯ ಕಡತಗಳಲ್ಲಿ ದಾಖಲಾಗಿದೆ. ಬಿ.ಎನ್.ರಾವ್ ಭಾರತ ಸಂವಿಧಾನದ ಮೂಲ ಕರಡನ್ನು ಸಭೆಯ ಮುಂದಿಟ್ಟರು. ಚರ್ಚೆಗಳು ನಡೆದು ಕೊನೆಗೆ ಅದು ಅಂಗೀಕೃತಗೊಳ್ಳುವಾಗ ಸಂವಿಧಾನದ ವಿಧಿಗಳ ಸಂಖ್ಯೆ ೩೯೫ ಮುಟ್ಟಿತ್ತು. ಜಗತ್ತಿನ ಅತೀ ದೊಡ್ಡ ಸಂವಿಧಾನ ಎಂಬ ಹೆಗ್ಗಳಿಕೆ ಭಾರತದ ಸಂವಿಧಾನ ಪಾತ್ರವಾಯಿತು. ಬಿ.ಎನ್.ನರಸಿಂಗ್‌ರಾವ್ ಬಗ್ಗೆ ಒಂದು ಘಟನೆಯನ್ನು ಹೇಳಬೇಕು. ೧೯೫೩ ಅಕ್ಟೋಬರ್‌ನಲ್ಲಿ ತೀವ್ರ ಅನಾರೋಗ್ಯದಿಂದಾಗಿ ಜ್ಯೂರಿಕ್ ಆಸ್ಪತ್ರೆಯಲ್ಲಿ ಇದ್ದಾಗ ಅಲ್ಲಿಗೆ ಭೇಟಿಕೊಟ್ಟ ಪಾಕಿಸ್ತಾನದ ಗೌರ್ನರ್ ಜನರಲ್ ಗುಲಾಮ್ ಮಹಮ್ಮದ್ "ಬನ್ನಿ, ಕರಾಚಿಯಲ್ಲಿ ನನ್ನ ಅತಿಥಿಯಾಗಿ ಇರಿ ನಾವು ನಿಮ್ಮ ಯೋಗಕ್ಷೇಮ ನೋಡಿಕೊಳ್ಳುತ್ತೇವೆ. ನಮ್ಮಲ್ಲಿ ನಿಮ್ಮಂಥವರು ಪಾಕಿಸ್ತಾನದಲ್ಲಿ ಇಲ್ಲ ಎಂದಿದ್ದರಂತೆ. ವಿಪರ್ಯಾಸವೆಂದರೆ ಬಿ.ಎನ್.ರಾವ್ ಅವರಂಥ ಓರ್ವ ದೇಶಭಕ್ತ ಸಂವಿಧಾನದ ಮೂಲ ರಚನೆಯನ್ನು ಕೊಟ್ಟ ಕಾನೂನು ಪಂಡಿತ, ಭಾರತದ ಕೀರ್ತಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಒಯ್ದ ಪ್ರತಿಭಾವಂತನನ್ನು ಭಾರತ ಮರೆತುಬಿಟ್ಟಿತು. ಸಂವಿಧಾನದ ದಿನದಂದು ಸರ್ಕಾರ ನೆಪಕ್ಕಾದರೂ ಅವರನ್ನು ಸ್ಮರಿಸಿದಂತೆ ಕಾಣಲಿಲ್ಲ. ಬಿಡಿ ಬಿ.ಎನ್.ರಾವ್ ನಮ್ಮ ಉಡುಪಿ ಮೂಲದವರು ಎಂಬ ಕಾರಣಕ್ಕಾದರೂ ಕನ್ನಡಿಗರು ಅವರನ್ನು ಹೆಮ್ಮೆಯಿಂದ ನೆನೆಯೋಣ.

– ಸುಧೀಂದ್ರ ಬುಧ್ಯ

ಸಾದರ - ಸ್ವೀಕಾರ

೧) ಪುಸ್ತಕದ ಹೆಸರು : **ಗಾಂಧೀ ಗೋವಿನ ಕಥೆಯಿದು!**
(ಗೋವಿನ ಹಾಡು ಶೈಲಿಯಲ್ಲಿ)

ಲೇಖಕರು : ಎಲ್. ನರಸಿಂಹಯ್ಯ ತೊಂಡೋಟಿ

ಪ್ರಕಾಶಕರು : ವಿಜಯ ಗೋಕುಲ, ೪೦ ಅಡಿ ರಸ್ತೆ, ಸಪ್ತಗಿರಿ ಬಡಾವಣೆ (ಪಶ್ಚಿಮ), ತುಮಕೂರು - ೫೭೨ ೧೦೨

ಬೆಲೆ : ೬೦/-

ಕನ್ನಡದಲ್ಲಿರುವ ಗಾಂಧೀ ಸಾಹಿತ್ಯಕ್ಕೆ ಹೊಸ ಸೇರ್ಪಡೆ "ಗಾಂಧೀ ಗೋವಿನ ಕಥೆಯಿದು!" ಈ ಪುಸ್ತಕದ ವಿಶೇಷತೆ ಏನೆಂದರೆ ಕನ್ನಡದ ಸುಪ್ರಸಿದ್ಧ ಮತ್ತು ಜನಪ್ರಿಯ ಕವಿತೆ "ಗೋವಿನ ಹಾಡು" ದಾಟಿಯಲ್ಲಿ ರಚಿತವಾಗಿರುವುದು. ೬೫ ಪುಟಗಳಷ್ಟು ವ್ಯಾಪ್ತಿಯಲ್ಲಿರುವ ಗಾಂಧೀ ಗೋವಿನ ಹಾಡು ಸುಲಭವಾಗಿ ಹಾಡಿಸಿಕೊಂಡು ಹೋಗುತ್ತದೆ. ಜೊತೆ ಜೊತೆಯಲ್ಲಿಯೇ ಗಾಂಧೀಜಿಯವರ ಸಂಪೂರ್ಣ ಜೀವನ ಚರಿತ್ರೆಯನ್ನು ಮನದಟ್ಟುಮಾಡಿಕೊಡುತ್ತದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದಂಥಹ ಪುಸ್ತಕ. ಏಕಕಾಲಕ್ಕೆ ಸಂಗೀತ, ಸಾಹಿತ್ಯ ಮತ್ತು ಮಹಾತ್ಮರ ಚರಿತ್ರೆಯ ಪರಿಚಯ ಗಾನಸುಧೆಯಾಗಿ ಹೊರಹೊಮ್ಮುತ್ತದೆ. ಮಕ್ಕಳನ್ನೇ ಕೇಂದ್ರವಾಗಿರಿಸಿಕೊಂಡು ಬರೆದ ಈ ಪುಸ್ತಕ ಶೀಘ್ರದಲ್ಲಿಯೇ ಎಲ್ಲರ ಮನ ಗೆಲ್ಲುವುದರಲ್ಲಿ ಸಂದೇಹವಿಲ್ಲ. "ಗೋವು ಮತ್ತು ಗಾಂಧೀ ಗೋವುಗಳೆರಡು ಹಿಂಸೆ ಮಾಡದೆ ಹಿಂಸೆ ಸಹಿಸುವ ಜಾಯಮಾನದವು; ಗೋವು ಕೆಲವೊಮ್ಮೆ ಒತ್ತಡ, ನೋವುಗಳನ್ನು ತಡೆಯಲಾಗದೆ ಹಾಯುವ, ಒದೆಯುವ, ಪ್ರತಿಕ್ರಿಯೆ ತೋರಿಸುವುದುಂಟು. ಆದರೆ ಗಾಂಧೀ ಗೋವು ಮಾತ್ರ ಅಂಥ ಕ್ರಿಯೆಗಳಿಂದ ದೂರವಾಗಿ ಬಾಳಿತು ಮಾತ್ರವಲ್ಲ ತನ್ನ ವ್ಯಕ್ತಿತ್ವವನ್ನು ಉತ್ತಮೀಕರಿಸಿಕೊಂಡಿತೆಂಬುದು ಸತ್ಯಸಂಗತಿ". ಎಂದು ಲೇಖಕರು ಹೇಳಿರುವ ಈ ಮಾತುಗಳು ಅವರ ಈ ಕೃತಿಯಲ್ಲಿ ಸ್ಪಷ್ಟವಾಗಿ ಒಡಮೂಡಿವೆ. ಗಾಂಧೀ ಗೋವಿನ ಹಾಡನ್ನು ಹಾಡಿದ ಎಲ್. ನರಸಿಂಹಯ್ಯರವರಿಗೆ ಅಭಿನಂದನೆಗಳು.

ವ್ಯಕ್ತಿ ಸ್ಮರಣೆ

ಮೈಸೂರು ನಗರ ಮಿತ್ರ ಕೆ.ಆರ್.ಮೋಹನ್

ಕೆ.ಆರ್.ಮೋಹನ್ ತೀರಿಕೊಂಡರು. ಈ ಸುದ್ದಿ ಬೇರೆಲ್ಲ ವ್ಯಕ್ತಿಗಳ ಮರಣ ಸುದ್ದಿಯಂತಯೇ ಇದೆ. ಆದರೆ ಮೈಸೂರು ನಗರದಲ್ಲಿಯ ಅನೇಕ ಸಹೃದಯಿ ಜೀವಿಗಳಿಗೆ, ಉಪಕಾರವನ್ನು ಸ್ಮರಿಸುವ ಜೀವಿಗಳಿಗೆ, ವಿವಿಧ ಬಗೆಯ ಕಲಾಕ್ಷೇತ್ರಗಳಲ್ಲಿಯ ಕಲಾವಿದರಿಗೆ, ರಾಮಕೃಷ್ಣಾಶ್ರಮದ ಭಕ್ತರಿಗೆ ಕೆ.ಆರ್.ಮೋಹನರ ಮರಣ ವಾರ್ತೆ ಸಿಡಿಲು ಸಮನಾಗಿತ್ತು. ಅವರಿಗೆ ೭೪ ವರ್ಷ ವಯಸ್ಸಾಗಿತ್ತು. ಅವರು ಕಾನೂನುಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರಗಳಲ್ಲಿ ಪದವೀಧರರಾಗಿದ್ದರು. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಪೂರ್ಣಾವಧಿಯ ಸೇವೆ ಸಲ್ಲಿಸಿದ್ದರು. ಸ್ಟಾರ್ ಆಫ್ ಮೈಸೂರು ಪತ್ರಿಕೆಗೆ ನಗರದಲ್ಲಿ ನಡೆಯುವ ಮುಖ್ಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪೂರ್ವಭಾವಿ ಪರಿಚಯ ಮಾಡಿಕೊಡುತ್ತಿದ್ದರು. ಸಾಹಿತಿ ಸತ್ಯಕಾಮರ ನಿಕಟ ಸಂಪರ್ಕ ಹೊಂದಿದ್ದರು. ಶಾರದಾ ಮಾತೆಯ ಅನನ್ಯ ಭಕ್ತರಾಗಿದ್ದರು. ಎಲ್ಲ ಕ್ಷೇತ್ರಗಳಲ್ಲಿಯ ಮಹತ್ವದ ವ್ಯಕ್ತಿಗಳ ಸಂಪರ್ಕ ವಿಳಾಸವನ್ನು ಮತ್ತು ದೂರವಾಣಿ ಸಂಖ್ಯೆಯನ್ನು ತಮ್ಮ ಬಳಿ ಇರಿಸಿಕೊಂಡಿದ್ದರು. ಅಗತ್ಯವಾದವರಿಗೆಲ್ಲ ಸಂಬಂಧಿಸಿದವರ ವಿಳಾಸ ಕೊಟ್ಟು ಅವರು ಮನ್ನಡೆಯುವಂತೆ ಮಾಡುತ್ತಿದ್ದರು. ಅವರ ಸಂಪರ್ಕ ಜಾಲ ಎಷ್ಟು ಉತ್ತಮವಾಗಿತ್ತೆಂದರೆ ಮತ್ತು ಪ್ರಯೋಜನಕಾರಿಯಾಗಿತ್ತೆಂದರೆ ಶ್ರೀ.ಕೆ.ಆರ್.ಮೋಹನ್‌ರವರನ್ನು "ಸಮನ್ವಯಿ ಪುರುಷ" ಎಂದು ಪುನರ್ ನಾಮಕರಣ ಮಾಡಬಹುದಾಗಿತ್ತು. ಇಂಥ ಸ್ನೇಹ ಪರ ವ್ಯಕ್ತಿ ಜೀವನದ ಕೊನೆಯ ಹಂತದಲ್ಲಿ ಅರ್ಬುದ ರೋಗದಿಂದ ಪೀಡಿತರಾಗಿ ಹೋದದ್ದು ಅತೀವ ಸಂಕಟದ ವಿಷಯ. ಮೈಸೂರು ನಗರದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ಕಾಣಿಸಿಕೊಳ್ಳುತ್ತಿದ್ದ ಮೋಹನ್ ಬಹು ಜನಪ್ರಿಯ ವ್ಯಕ್ತಿಯಾಗಿದ್ದರು. ಸಂಸ್ಕೃತ ವಿದ್ವಾಂಸ ಮತ್ತು ಸನಾತನ ಧರ್ಮದಲ್ಲಿ ಅಭಿಮಾನವಿಟ್ಟಿದ್ದ ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿದ್ದ ಕೌಲಗಿ ಶೇಷಾಚಾರ್ಯರ ಮಗನಾಗಿದ್ದ ಮೋಹನ್ ತಂದೆಯ ಇಳಿ ವಯಸ್ಸಿನಲ್ಲಿ ಪಿತೃಸೇವೆ ಮಾಡಿ ಸೈ ಎನಿಸಿಕೊಂಡಿದ್ದರು. ತಂದೆಯ ವಿದ್ವತ್ತು, ಪರಂಪರೆಯಲ್ಲಿಯ ಆಸ್ಥೆ ಮತ್ತು ಸಾತ್ವಿಕ ಸ್ವಭಾವ ಮೋಹನ್‌ರವರ ಸ್ವಭಾವದಲ್ಲೂ ಹಾಸುಹೊಕ್ಕಾಗಿದ್ದವು. ಜನಪ್ರಿಯ ಕನ್ನಡ ಮಾಸಪತ್ರಿಕೆ ಕಸ್ತೂರಿಯಲ್ಲಿ ಪುಸ್ತಕ ವಿಭಾಗಕ್ಕೆ ಹಲವಾರು ಪುಸ್ತಕಗಳನ್ನು ಪರಿಚಯ ಮಾಡಿಕೊಟ್ಟಿದ್ದರು.

ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದರು. ವಿವೇಕಪ್ರಭ ಪತ್ರಿಕೆಗೆ ಸ್ವಾಮಿ ವಿವೇಕಾನಂದರ ಚಿತ್ರಗಳಲ್ಲಿಯ ಐತಿಹಾಸಿಕ ಸಂಗತಿಗಳನ್ನು ಪರಿಚಯಮಾಡಿಕೊಡುವ ಲೇಖನ ಮಾಲೆ ಬರೆದಿದ್ದರು. ಅದು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುವುದನ್ನು ನೋಡಬಯಸಿದ್ದರು. ಜನಪದ ವಿಚಾರದ ಅಭಿಮಾನಿಯಾಗಿದ್ದರು. ಅನೇಕ ಜನ ಸ್ನೇಹಿತರನ್ನು ಪತ್ರಿಕೆಗೆ ಚಂದಾದಾರರನ್ನಾಗಿ ಮಾಡಿಕೊಟ್ಟಿದ್ದರು. ಲೇಖನ ಬರೆದು ಕೊಡುವಂತೆ ಪ್ರೋತ್ಸಾಹಿಸುತ್ತಿದ್ದರು. ಮೈಸೂರಿನಲ್ಲಿ ನಡೆಯುವ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅವುಗಳ ವಿವರಣಾತ್ಮಕ ವರದಿಗಳನ್ನು ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ತನ್ಮೂಲಕ ಕಲಾವಿದರಿಗೆ ಪ್ರೋತ್ಸಾಹಿಸುತ್ತಿದ್ದರು. ಸಿಂಡಿಕೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ದೇಶದ ಎಲ್ಲ ಪ್ರಮುಖ ನಗರಗಳಲ್ಲಿ ಸೇವೆ ಸಲ್ಲಿಸಿದರು. ಅವರು ಕೆಲಸಮಾಡಿದ ಪ್ರಮುಖ ಸ್ಥಳಗಳು ದಿಲ್ಲಿ, ಕಲ್ಕತ್ತಾ, ಭುವನೇಶ್ವರ ಮುಂತಾದವುಗಳಿವೆ. ಮೈಸೂರು ನಗರದಲ್ಲಿರುವ ಎಲ್ಲ ಪ್ರಮುಖ ವಿಚಾರವಾದಿಗಳೊಂದಿಗೆ ಅವರು ಸಂಪರ್ಕ ಹೊಂದಿದ್ದರು. ತಮ್ಮ ಎಲ್ಲ ಬಗೆಯ ಸಂಪರ್ಕಗಳನ್ನು ಮೋಹನ್ ಅವರು ತಮ್ಮ ಸ್ವಂತದ ಕಾರಣಕ್ಕಾಗಿ ಉಪಯೋಗಿಸಿಕೊಳ್ಳದೆ ಬೇರೆಯವರಿಗೆ ನೆರವಾಗಲು ಉಪಯೋಗಿಸಿಕೊಳ್ಳುತ್ತಿದ್ದರು. ಅವರಲ್ಲಿಯ ಈ ವಿಶೇಷ ಗುಣವನ್ನು ಎಲ್ಲರೂ ಗುರುತಿಸಿದ್ದರು. ಆದ್ದರಿಂದಲೇ ಮೋಹನ್ ಅವರ ಬಗ್ಗೆ ಎಲ್ಲರಿಗೂ ಎಲ್ಲಿಲ್ಲದ ಗೌರವ ಮತ್ತು ಆತ್ಮೀಯತೆ. ಸಾಯುವವರೆಗೂ "ಕುರ್ವನ್ ಏವ ಇಹ ಕರ್ಮಾಣಿ।ಜಿಜೀವಿಷೇತ್ ಶತಂ ಸಮಾಃ" ಎಂಬ ಉಕ್ತಿಯಂತೆ ಅವರು ತಮ್ಮ ಜೀವನ ಸವೆಸುತ್ತಿದ್ದರು. ಮೋಹನ್ ಶತಾಯುಶಿಯಾಗಬೇಕಿತ್ತೆಂಬುದೇ ಎಲ್ಲ ಆತ್ಮೀಯರ ಇಚ್ಛೆಯಾಗಿತ್ತು. ಅವರು ಎಂದೂ ತಮ್ಮ ವ್ಯಕ್ತಿಗತ ಜೀವನದ ವಿಷಯಗಳನ್ನು ಯಾರೊಂದಿಗೂ ಪ್ರಸ್ತಾಪಿಸುತ್ತಿರಲಿಲ್ಲ. ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ ಅದನ್ನು ಅವರೇ ಅನುಭವಿಸಿಕೊಳ್ಳುತ್ತಿದ್ದರು. ಆದರೆ ಬೇರೆಯವರ ಸಂತಸದಲ್ಲಿ ಪಾಲ್ಗೊಳ್ಳುವುದನ್ನು ಮಾತ್ರ ಮರೆಯುತ್ತಿರಲಿಲ್ಲ. ಹೊರಗೆ ಲೋಕಾಸಕ್ತಿ, ಒಳಗೆ ಸಕಲ ವಿರಕ್ತಿ, ಹೊರಗೆ ಕಾರ್ಯಧ್ಯಾನ, ಒಳಗೆ ಉದಾಸೀನ, ಹೊರಗೆ ಸಂಸ್ಕೃತಿ ಭಾರ, ಒಳಗದರ ತಾತ್ಸಾರ, ವರ ಯೋಗ ಮಾರ್ಗವಿದು – ಮಂಕುತಿಮ್ಮ ಎಂಬ ಮಾತುಗಳು ಮೋಹನ್‌ರವರ ವ್ಯಕ್ತಿತ್ವಕ್ಕೆ ತುಂಬ ಅನ್ವಯಿಸುವಂಥವು. ಮರಣೋತ್ತರ ನಂತರ ಆತ್ಮ ವಿಕಸಿಸುತ್ತ ಪರಮಾತ್ಮನನ್ನು ಸೇರುವ ದೇವಯಾನ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಕೆ.ಆರ್.ಮೋಹನ್‌ರವರ ಆತ್ಮಕ್ಕೆ ಶಾಂತಿ ಸಿಗಲಿ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೊಸ ಜೀವನದಾರಿ ಕೇಂದ್ರದಲ್ಲಿ ಜಮ್ನಾಲಾಲ್ ಬಜಾಜ್ ಟ್ರಸ್ಟ್‌ನವರ ಧನ ಸಹಾಯದೊಂದಿಗೆ ಹೊಸ ಕಟ್ಟಡದ ನಿರ್ಮಾಣ ಪೂರ್ಣಗೊಂಡಿದೆ. ಇತರ ಸಣ್ಣ ಪುಟ್ಟ ಕೆಲಸಗಳು ಮುಗಿದಾದ ನಂತರ ಕಟ್ಟಡ ಔಪಚಾರಿಕ ಪ್ರಾರಂಭೋತ್ಸವವನ್ನು ಇಟ್ಟುಕೊಳ್ಳಲಾಗುವುದು. ಕೇಂದ್ರದಲ್ಲಿ ನಡೆಯುವ ಶಿಬಿರಾರ್ಥಿಗಳ ವಾಸಕ್ಕಾಗಿ ಮತ್ತು ಇತರ ಚಟುವಟಿಕೆಗಳಿಗಾಗಿ ಅನುಕೂಲವಾಗುವ ದೃಷ್ಟಿಯಿಂದ ನಿರ್ಮಿಸಲಾಗಿದೆ. ಕಟ್ಟಡದ ನಿರ್ಮಾಣದ ಖರ್ಚಿನ ಕಡೆಗೆ ಇನ್ನೂ ಹಲವಾರು ಅಭಿಮಾನಿಗಳು ಸಹಾಯಮಾಡಿದ್ದಾರೆ. ಅವರೆಲ್ಲರಿಗೆ ಟ್ರಸ್ಟ್ ಆಭಾರಿಯಾಗಿದೆ. ಕಳೆದ ತಿಂಗಳು ಬೆಂಗಳೂರಿನ ಪ್ರಕ್ರಿಯಾ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎರಡು ತಂಡಗಳಲ್ಲಿ ಬಂದು ಹೊಸ ಜೀವನ ದಾರಿಯಲ್ಲಿ ಶಿಬಿರ ನಡೆಸಿದರು. ಪಕ್ಷಿ ವೀಕ್ಷಣೆ ಪ್ರಕೃತಿ ಸಂಪತ್ತನ್ನು ಪರಿಚಯ ಮಾಡಿಕೊಂಡರಲ್ಲದೆ ಖಾದಿ ಉದ್ಯಮದ ಬಗ್ಗೆಯೂ ತಿಳಿದುಕೊಂಡರು. ಹಲವಾರು ಶೈಕ್ಷಣಿಕ ಸಾಕ್ಷ್ಯ ಚಿತ್ರಗಳನ್ನು ವೀಕ್ಷಿಸಿದರು.

******

ಬೆಂಗಳೂರಿನ ಬಿ.ಎಮ್.ಎಸ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿಯರು ಒಂದು ದಿನದ ಶೈಕ್ಷಣಿಕ ಕಾರ್ಯಕ್ರಮವನ್ನು ಹೊಸ ಜೀವನ ದಾರಿಯಲ್ಲಿ ನಡೆಸಿದರು.

******

ಜನಪದ ಸೇವಾಟ್ರಸ್ಟಿನ ೨೦೧೪-೧೫ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು ೨೭.೧೨.೨೦೧೫ರಂದು ಜನಪದ ನಿಲಯದಲ್ಲಿ ಏರ್ಪಡಿಸಲಾಗಿದೆ. ೧೪-೧೫ನೇ ಸಾಲಿನ ಕಾರ್ಯವರದಿ ಪರಿಶೀಲನೆ ಆಡಿಟ್ ಆದ ಲೆಕ್ಕ ಪತ್ರ ದೃಢೀಕರಿಸುವುದು ಮುಂತಾದ ವಿಷಯಗಳಲ್ಲದೆ ೨೦೧೬-೧೭ನೇ ಸಾಲಿಗೆ ಹೊಸ ಕಾರ್ಯಕಾರಿ ಮಂಡಲಿಯ ಆಯ್ಕೆಯು ಸಹ ನಡೆಯುವುದು. ಸಭೆಯ ಅಧ್ಯಕ್ಷತೆಯನ್ನು ಡಾ.ಎಮ್.ಸಿ.ಮನೋಹರ್‌ರವರು ವಹಿಸುವರು.

ಜನಪದ ನಿಲಯದ ಅಂತರಂಗದಲ್ಲಿ – ೧೪೧



‘ಹೊಸ ಜೀವನ ದಾರಿ’ ಎಂಬುದು ಜನಪದ ಸೇವಾ ಟ್ರಸ್ಟಿನ ಸೇವಾ ಕೇಂದ್ರ. ಜೀವನದ ಸತ್ಯಗಳನ್ನು ಅರಸುವುದು, ಅರಿಯುವುದು ಮತ್ತು ತಮ್ಮದನ್ನಾಗಿ ಮಾಡಿಕೊಳ್ಳುವ ಪ್ರಯತ್ನದ ಕ್ಷೇತ್ರ ಅದು. ಬದುಕಿಗೊಂದು ನಂಬಿಕೆ ಇರಬೇಕೆಂಬ ಅನುಭವದ ಮಾತಿನ ಪ್ರಕಾರ ಆ ಕೇಂದ್ರದಲ್ಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ಜೀವನದಲ್ಲಿ ನಂಬಿಕೆಯೊಂದು ಮೂಡಿದರೆ ಕೇಂದ್ರದ ಸ್ಥಾಪನೆಯ ಹಿಂದಿರುವ ಉದ್ದೇಶ ಕೊಂಚಾರದೂ ನೆರವೇರಿತೆಂಬ ಸಮಾಧಾನ. ಇಲ್ಲಿ ಪ್ರಸ್ತಾಪಿಸುತ್ತಿರುವುದು ಹೊಸ ಜೀವನ ದಾರಿ ಕೇಂದ್ರದ ಕಥೆ ಮತ್ತು ವ್ಯಥೆ. ಇದು ಕಾರ್ಯಕ್ರಮಗಳಿಗೆ ಸಂಬಂಧ ಪಟ್ಟದ್ದಲ್ಲ. ಭೂ ವ್ಯವಹಾರಕ್ಕೆ ಸಂಬಂಧಿಸಿದ್ದು. ಕೇಂದ್ರ ಸುಮಾರು ಇಪ್ಪತ್ತು ಎಕರೆಗಳಷ್ಟು ಭೂಪ್ರದೇಶ ಹೊಂದಿದೆ. ಇದು ಈಡಿಗ ಕರೀಗೌಡ ಮತ್ತು ನಾರಾಯಣಶಾಸ್ತ್ರಿಯವರ ಹೆಸರಿನಲ್ಲಿ ಇದ್ದ ಹಿಡುವಳಿ ಜಮೀನು ಆಗಿತ್ತು. ಇದು ಮೇಲುಕೋಟೆಯಿಂದ ಆರು ಕಿಲೋಮೀಟರ್ ದೂರದಲ್ಲಿ ಇದ್ದುದರಿಂದ ಅವರಿಬ್ಬರಿಗೂ ಅಷ್ಟು ದೂರ ಹೋಗಿ ವ್ಯವಸಾಯ ಮಾಡಲಿಕ್ಕಾಗದೆ ಪಾಳುಬಿಟ್ಟಿದ್ದರು. ಜಮೀನಿನ ಪಶ್ಚಿಮ ದಿಕ್ಕಿನ ಕಡೆಗೆ ರಸ್ತೆ ಪಕ್ಕ ಕಾಡು ಕಲ್ಲುಗಳನ್ನು ಉಪಯೋಗಿಸಿ ನಾಲ್ಕು ಅಡಿ ಎತ್ತರದ ಗೋಡೆಯನ್ನು ನಿರ್ಮಿಸಿದ್ದರು. ಈ ಗೋಡೆ ಸುಮಾರು ೨೦೦ಅಡಿ ಇರಬಹುದು. ಅಲ್ಲಲ್ಲಿ ಕೆಲವು ಕಾಡು ಮರಗಳಿದ್ದವು. ನಾರಾಯಣ ಶಾಸ್ತ್ರಿ ಎಂಬುವರು ನಾಗಮಂಗಲದ ನಿವಾಸಿಯಾದುದರಿಂದ ಅವರು ಜಮೀನಿನ ಕಡೆಗೆ ಬರುತ್ತಿದ್ದುದೇ ಬಲು ಅಪರೂಪ. ಎಲ್ಲಾ ಜವಾಬ್ದಾರಿಯನ್ನು ಕರೀಗೌಡರಿಗೆ ವಹಿಸಿಟ್ಟಿದ್ದರು. ಕರೀಗೌಡರು ವ್ಯವಹಾರ ಕುಶಲಿಯಾಗಿದ್ದರು. ಸ್ಥಳೀಯ ಒಳ್ಳೆರಾಜಕಾರಣಿ ಆಗಿದ್ದರು. ೬೦ರ ದಶಕಗಳಲ್ಲಿ ಮೇಲುಕೋಟೆಯಿಂದ ನಾರಾಯಣಪುರಕ್ಕೆ ಹೋಗುವ ದಾರಿ ಸರಿಇರಲಿಲ್ಲ. ಜನಸಂಚಾರ ಬಹಳ ವಿರಳವಾಗಿತ್ತು. ಬಸ್ ಸಂಪರ್ಕ ಇರಲೇ ಇಲ್ಲ. ನಾರಾಯಣಪುರದಿಂದ ಮೇಲುಕೋಟೆಗೆ ಬರುವವರು ಮತ್ತು ಮೇಲುಕೋಟೆಯಿಂದ ನಾರಾಯಣಪುರದ ಕಡೆ ಹೋಗುವವರು ಸುಮಾರು ೫೦–೬೦ ಕಡಿದಾದ ಬಂಡೆಯಂಥ ಮೆಟ್ಟಿಲುಗಳನ್ನು ಇಳಿದೆ ಹೋಗಬೇಕಾಗಿತ್ತು. ಆದ್ದರಿಂದ ಕರೀಗೌಡ ಮತ್ತು ನಾರಾಯಣಶಾಸ್ತ್ರಿಯವರ ಜಮೀನಿಗೆ ಹೋಗಿ ಬರುವುದು ಒಂದು ರೀತಿ

ಸಾಹಸವೇ ಆಗಿತ್ತು. ಅಂಥ ಜಮೀನನ್ನು ನಾರಾಯಣಶಾಸ್ತ್ರಿಯವರ ಒಪ್ಪಿಗೆ ಮೇರೆಗೆ ಕರೀಗೌಡರು ಟ್ರಸ್ಟಿಗೆ ಖರೀದಿಗೆ ಕೊಡಲು ಮುಂದೆ ಬಂದರು. ಜಮೀನು ಖರೀದಿದಾಗಿ ನಾವು ಪ್ರಯತ್ನಿಸಿದ್ದಕ್ಕಿಂತ ಕರೀಗೌಡರೇ ಸ್ವತಃ ಮೇಲೆ ಬಿದ್ದು ಅದನ್ನು ಖರೀದಿಸಲು ಒತ್ತಾಯಿಸಿದರು. ಅದೇ ವೇಳೆಗೆ ಟ್ರಸ್ಟ್‌ನಲ್ಲಿದ್ದ ಅಂಗವಿಕಲ ಮಕ್ಕಳ ಹೆಚ್ಚಿನ ಚಟುವಟಿಕೆಗಳಿಗಾಗಿ ವಿಶಾಲವಾದ ಪ್ರದೇಶವನ್ನು ಹುಡುಕುತ್ತಿದ್ದೆವು. ಕರೀಗೌಡರ ಒತ್ತಾಯವು ಕೂಡಿ ಬಂದಿತು. ತತ್ಫಲವಾಗಿ ಸುಮಾರು ಇಪ್ಪತ್ತು ಎಕರೆ ಒಣ ಭೂ ಪ್ರದೇಶವನ್ನು ಖರೀದಿ ಮಾಡಲಾಯಿತು. ಅಲ್ಲಿ ನೀರಿನ ಯಾವ ಆಸರೆಯೂ ಇರಲಿಲ್ಲ. ಕರೀಗೌಡರು ಕಡಿಮೆ ಬೆಲೆಗೆ ಭೂಮಿಯನ್ನು ಕೊಟ್ಟರಲ್ಲದೆ ಕಂತುಗಳಲ್ಲಿ ಹಣವನ್ನು ಪಡೆದರು. ಕರೀಗೌಡರು ಉದಾರ ಮನಸ್ಸು ಮಾಡದೆ ಹೋಗಿದ್ದರೆ ಹೊಸ ಜೀವನ ದಾರಿಯಂಥ ಕಾರ್ಯಕ್ರಮವು ಪ್ರಾರಂಭವಾಗುತ್ತಿರಲಿಲ್ಲ. ಅವರಿಗೂ ನಾರಾಯಣಶಾಸ್ತ್ರೀಯವರಿಗೂ ಟ್ರಸ್ಟ್ ಆಭಾರಿಯಾಗಿದೆ. ಈ ಹಂತದವರೆಗೆ ಎಲ್ಲವೂ ಸುಖಕರ ಮತ್ತು ನೆಮ್ಮದಿಯ ವ್ಯವಹಾರವಾಗಿತ್ತು. ಹೊಸ ಚಪ್ಪಲಿಯನ್ನು ಹಾಕಿಕೊಂಡವರಿಗೆ ಅದು ಎಲ್ಲಿ ಚುಚ್ಚುತ್ತದೆ ಎಂದು ಗೊತ್ತಾಗುವಂತೆ ಜಮೀನು ಖರೀದಿಸಿದ ಮೇಲೆ ವಿಧ ವಿಧ ಸಮಸ್ಯೆಗಳು ಎದುರಾಗತೊಡಗಿದವು. ಆ ಪ್ರದೇಶದಲ್ಲಿ ಯಾವುದೇ ವ್ಯವಸಾಯ ಇರಲಿಲ್ಲವಾದ್ದರಿಂದ ಪಕ್ಕದ ಹಳ್ಳಿಯವರು ತಮ್ಮ ದನ ಕರುಗಳನ್ನು ಮತ್ತು ಕುರಿಗಳನ್ನು ಮೇಯಿಸುತ್ತಿದ್ದರು. ಅದು ಒಂದು ಪ್ರಕಾರ ಗೋಮಾಳವೇ ಆಗಿತ್ತು. ಟ್ರಸ್ಟ್ ಆ ಪ್ರದೇಶವನ್ನು ಖರೀದಿಸಿ ಸ್ವಲ್ಪ ಚಟುವಟಿಕೆಗಳನ್ನು ಪ್ರಾರಂಭಿಸಿ ದನ ಕರುಗಳನ್ನು ಮೇಯಿಸುವುದಕ್ಕೆ ತಡೆ ಮಾಡಿದ ಕೂಡಲೇ ಸಮಸ್ಯೆ ಪ್ರಾರಂಭವಾಯಿತು. ಅತಿಕ್ರಮಣದ ಕಾರಣದಿಂದ ಜಗಳಗಳಾಗಲಾರಂಭಿಸಿದವು. ತಾತ್ಕಾಲಿಕವಾಗಿ ಕಟ್ಟಿದ ಮನೆಯಲ್ಲಿ ಇಡಲಾಗುತ್ತಿದ್ದ ಸಾಮಾನುಗಳು ಕಳುವಾಗಲಾರಂಭಿಸಿತ್ತು. ಹೇಗಾದರೂ ಮಾಡಿ ಅಲ್ಲಿದ್ದ ಟ್ರಸ್ಟ್‌ನವರನ್ನು ಓಡಿಸಬೇಕೆಂಬುದೇ ಅವರ ವಿಚಾರವಾಗಿತ್ತು. ಏತನ್ಮಧ್ಯೆ ಆ ಗ್ರಾಮಸ್ಥರ ಮಧ್ಯಯೇ ಕೆಲ ಸಮಾಜೋಪಯೋಗಿ ಕೆಲಸಗಳನ್ನು ಟ್ರಸ್ಟ್ ಪ್ರಾರಂಭಿಸಿತು. "ಪ್ರಯೋಗ ಶಾಲೆಯಿಂದ ಭೂಮಿಗೆ" ಎಂಬ ಕಾರ್ಯಕ್ರಮದಡಿ ಟ್ರಸ್ಟಿಗೆ ದೊರೆತಿದ್ದ ಧನ ಸಹಾಯದ ಮೂಲಕ ಅನೇಕ ಬಡ ರೈತರಿಗೆ ತೆಂಗಿನ ಸಸಿಗಳನ್ನು ಮತ್ತು ಸುಧಾರಿತ ಕುರಿ ತಳಿಗಳನ್ನು ವಿತರಿಸಲಾಯಿತು. ಕೂಲಿಗೆ ಕಾಳು ಎಂಬ ಯೋಜನೆಯಡಿ ಕೆಲಸ ಮಾಡಿದ ಆಳುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅನ್ನಧಾನ್ಯ ಕೊಡಲಾಯಿತು. ಅವರೆಲ್ಲರ ಉಪಯೋಗಕ್ಕಾಗಿ "ನಮ್ಮ ಅಂಗಡಿ" ಎಂಬ ಹೆಸರಿನ ನ್ಯಾಯಬೆಲೆ ಅಂಗಡಿಯನ್ನು ಪ್ರಾರಂಭಿಸಲಾಯಿತು. ಅದರ ಮೂಲಕ ಪಡಿತರ ಧಾನ್ಯಗಳನ್ನು ಸೀಮೆಎಣ್ಣೆಯನ್ನು ಮತ್ತು ಬಟ್ಟೆಯನ್ನು ಸರಬರಾಜು ಮಾಡಲಾಗುತ್ತಿತ್ತು. ಬಡ ರೈತ ಕಾರ್ಮಿಕರಿಗೆ ಉಪಯೋಗವಾಗಲೆಂದು "ಕಾಳು ಬ್ಯಾಂಕ್" ಪ್ರಾರಂಭಿಸಿ ಅದರ ಮೂಲಕ ಬಡ ರೈತರಿಗೆ ಅನುಕೂಲ

ಮಾಡಿಕೊಡುವ ಪ್ರಯತ್ನವೂ ನಡೆಯಿತು. ಇದರ ಜೊತೆಗೆ "ಒಕ್ಕಲುತನ ಸೇವಾ ಕೇಂದ್ರ" ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಸೇವಾ ಕೇಂದ್ರದ ಮೂಲಕ ಅಗತ್ಯವಿರುವ ರೈತರಿಗೆ ಸಕಾಲಕ್ಕೆ ಉಳುಮೆ ಮಾಡಲು ಎತ್ತುಗಳನ್ನು ಉಪಯೋಗಕ್ಕೆ ಕೊಡಲಾಗುತ್ತಿತ್ತು. ಸ್ಪ್ರೇಯರನ್ನು ಕೊಡಲಾಗುತ್ತಿತ್ತು. ಹಣ್ಣು ಮತ್ತು ತರಕಾರಿ ಬೀಜಗಳನ್ನು ಸರಬರಾಜು ಮಾಡಲಾಗುತ್ತಿತ್ತು. ಇಂಥ ವಿವಿಧ ಬಗೆಯ ಸೇವಾ ಕಾರ್ಯಗಳು ನಡೆದರೂ ಅಕ್ಕ ಪಕ್ಕದವರು ತರೆವಾರು ತೊಂದರೆ ಕೊಡುವುದನ್ನು ಮಾತ್ರ ನಿಲ್ಲಿಸಲಿಲ್ಲ. ತೆಂಗಿನ ಸಸಿ ನೆಡುವುದಕ್ಕಾಗಿ ತೊಡಲಾಗಿದ್ದ ಗುಂಡಿಯಲ್ಲಿ ಹಸುವೊಂದು ಓಡುವ ರಭಸದಲ್ಲಿ ಗುಂಡಿಯಲ್ಲಿ ಕಾಲುಹಾಕಿ ಮುರಿದುಕೊಂಡಿತು. ಆಗ ಪಕ್ಕದ ಹಳ್ಳಿಯವರೆಲ್ಲ ಒಂದು ಪಂಚಾಯತಿ ಮಾಡಲು ಪ್ರಾರಂಭಿಸಿದರು. ಪರಿಹಾರವಾಗಿ ಹಣ ಕೇಳಲು ಪ್ರಾರಂಭಿಸಿದರು. ಅದಕ್ಕೆ ನಾವು ಒಪ್ಪದೇ ಹಸುವನ್ನು ಮೇಲುಕೋಟೆಗೆ ತಂದು ಇಲ್ಲೇ ಇರಿಸಿಕೊಂಡು ಸ್ಥಳೀಯ ಪಶುವೈದ್ಯರಿಂದ ಅದಕ್ಕೆ ಚಿಕಿತ್ಸೆ ಕೊಡಿಸಲಾರಂಭಿಸಿದೆವು. ಒಂದು ವಾರದ ನಂತರ ಹಸು ಓಡಾಡಲು ಪ್ರಾರಂಭಿಸಿದ ಮೇಲೆ ಅದನ್ನು ಸಂಬಂಧಿಸಿದವರಿಗೆ ಅದನ್ನು ಕೊಟ್ಟೆವು. ಇಂದಿಗೂ ಕೂಡ ದನಗಳ ಮತ್ತು ಜನರ ಅಕ್ರಮ ಪ್ರವೇಶ ತಪ್ಪಿಲ್ಲ. ತುಂಬಾ ಇತ್ತೀಚೆಗೆ ಪಕ್ಕದ ಜಮೀನಿನ ವ್ಯಕ್ತಿಯೊಬ್ಬ ಕದ್ದು ಮರ ಕಡಿದು ಟ್ರಸ್ಟಿನ ಖಾಲಿ ಇರುವ ಒಂದು ಮನೆಯಲ್ಲಿ ತಂದು ಹಾಕಿ ನಮ್ಮ ಮೇಲೆಯೇ ದೂರು ಕೊಡುವ ಪ್ರಯತ್ನ ಮಾಡಿದರು. ಕೃಷಿಯ ಅನುಭವ ಇಲ್ಲದೇ ಇದ್ದುದರಿಂದ ಅನೇಕ ಬಗೆಯ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಯಿತು. ಕೇವಲ ಆಳುಗಳನ್ನೇ ಅವಲಂಬಿಸಿ ಮಾಡಬೇಕಾಗಿರುವುದರಿಂದ ತೊಂದರೆಗಳ ಸಂಖ್ಯೆ ದ್ವಿಗುಣಗೊಳ್ಳುತ್ತಿತ್ತು. ಈಗ ಮೇಲುಕೋಟೆಯಿಂದ "ಹೊಸ ಜೀವನ ದಾರಿಗೆ" ಹೋಗುವ ದಾರಿ ಡಾಂಬರು ಕಂಡಿದೆ. ಬಸ್ ಸಂಚಾರ ಮತ್ತು ವಾಹನ ಸಂಚಾರ ಹೆಚ್ಚಾಗಿದೆ. ಅತ್ಯಾಧುನಿಕ ಮೊರಾರ್ಜಿ ಶಾಲೆ ಬಂದಿದೆ. "ಆನಂದಾಶ್ರಮ" ಹೆಸರಿನ ಆಶ್ರಮ ಶುರುವಾಗಿದೆ. ಇಸ್ಕಾನ್ ಸಂಸ್ಥೆಯವರು ಒಂದು ಆಶ್ರಮ ಕಟ್ಟುತ್ತಿದ್ದಾರೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗಾಗಿ ಮತ್ತು ಆರಕ್ಷಕ ಠಾಣೆಗಾಗಿ ಹೊಸ ಕಟ್ಟಡಗಳು ಬರುತ್ತಿವೆ. ಹೀಗೆ ಐದು ದಶಕಗಳ ಹಿಂದೆ ನಾರಾಯಣಪುರದಿಂದ ಮೇಲುಕೋಟೆಗೆ ಮೊಸರು ಮತ್ತು ಸೌದೆ ಮಾರಲು ಬರುತ್ತಿದ್ದ ಹೆಣ್ಣು ಮಕ್ಕಳು ಸಂಚರಿಸುತ್ತಿದ್ದ ಆ ದಾರಿ ಅಭಿವೃದ್ಧಿಯ ಕಾರಣದಿಂದ ಸ್ವರೂಪ ಬದಲಾಯಿಸಿಕೊಳ್ಳುತ್ತಿದೆ. ಹೊಸ ಜೀವನ ದಾರಿ ಕೇಂದ್ರ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡಬೇಕಾಗುತ್ತದೆ. ಎಲ್ಲರ ಸಹಾನುಭೂತಿಯ ಕಾರಣದಿಂದ "ಹೊಸ ಜೀವನ ದಾರಿ" ತನ್ನ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಉಳಿಸಿಕೊಳ್ಳುವುದೆಂಬ ನಂಬಿಕೆಯಿದೆ.

ಸರ್ವೋದಯ ಆಂದೋಲನದ ಮುನ್ನಡೆ

ಮಹಿಳಾ ಶಿಬಿರ

ಕಸ್ತೂರ್‌ಬಾ ಗಾಂಧಿಯವರ ಪುಣ್ಯ ತಿಥಿಯ ನಿಮಿತ್ತವಾಗಿ ೨೦೧೬ ಫೆಬ್ರವರಿ ೨೦ರಿಂದ ೨೨ನೇ ತಾರೀಖಿನವರೆಗೆ ಗಾಂಧೀಜಿಯವರ ಆಶ್ರಮ ಸೇವಾಗ್ರಾಮದಲ್ಲಿ ರಾಷ್ಟ್ರೀಯ ಮಹಿಳಾ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಇದರ ಆಯೋಜನೆಯನ್ನು ಸರ್ವ ಸೇವಾ ಸಂಘ ಮಾಡುತ್ತಿದೆ. ಈ ಶಿಬಿರದ ಉದ್ದೇಶ : "ಮಹಿಳೆಯರ ದಕ್ಷತೆ ಮತ್ತು ವೈಚಾರಿಕ ನೆಲೆಯನ್ನು ವಿಕಸಿತಗೊಳಿಸುವುದು ಹಾಗೂ ಸರ್ವೋದಯ ಆಂದೋಲನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದೇ ಆಗಿದೆ." ಈ ಶಿಬಿರದಲ್ಲಿ ದೇಶದ ವಿವಿದೆಡೆಯಿಂದ ಮಹಿಳಾ ಸರ್ವೋದಯ ಕಾರ್ಯಕರ್ತೆಯರು ಮತ್ತು ಸರ್ವೋದಯದ ಕೆಲಸದಲ್ಲಿ ತೊಡಗಿಸಿಕೊಂಡಿರುವ ಸರ್ವೋದಯ ಪರಿವಾರಗಳ ಮಹಿಳೆಯರು ಹಾಗೂ ಗಾಂಧೀ ವಿಚಾರದೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ಮಹಿಳೆಯರೆಲ್ಲರೂ ಭಾಗವಹಿಸುವರು. ಸರ್ವೋದಯ ಆಂದೋಲನದಲ್ಲಿ ಮಹಿಳೆಯರ ಪಾತ್ರದ ಮಹತ್ವ ನಿಮಗೆ ಗೊತ್ತಿದೆ. ಅದನ್ನು ಹೆಚ್ಚಿಸುವುದು ಹಾಗೂ ನೇತೃತ್ವದ ಭೂಮಿಕೆಗೆ ತರಬೇಕಾದುದು ನಮ್ಮ ವಿಶೇಷ ಜವಾಬ್ದಾರಿಯಾಗಿದೆ. ನಿಮ್ಮ ನಿಮ್ಮ ಪ್ರದೇಶದಿಂದ ಸೂಕ್ತ ಭೂಮಿಕೆಯುಳ್ಳ ಮಹಿಳೆಯರನ್ನು ಶಿಬಿರದಲ್ಲಿ ಪಾಲ್ಗೊಳ್ಳಲು ಕಳುಹಿಸಬೇಕಾಗಿ ವಿನಂತಿ. ಶಿಬಿರದಲ್ಲಿ ವಸತಿ ಮತ್ತು ಭೋಜನದ ವ್ಯವಸ್ಥೆ ಉಚಿತವಾಗಿರುವುದು. ಹೋಗಿ ಬರುವ ಪ್ರವಾಸದ ಖರ್ಚನ್ನು ಶಿಬಿರಾರ್ಥಿಗಳು ಸ್ವತಃ ವಹಿಸಿಕೊಳ್ಳಬೇಕು ಅಥವಾ ಸ್ಥಳೀಯ ಸರ್ವೋದಯ ಮಿತ್ರ ಮಂಡಲಿಗಳ ಸಹಯೋಗದೊಂದಿಗೆ ನಿರ್ವಹಿಸಿಕೊಳ್ಳಬೇಕು. ಭಾಗವಹಿಸುವ ಸಹೋದರಿಯರು ಫೆಬ್ರವರಿ ೧೯ರಂದು ಸೇವಾಗ್ರಾಮ ತಲುಪಬೇಕು. ಫೆಬ್ರವರಿ ೨೨ರ ಸಂಜೆ ೫ರ ವರೆಗೆ ಶಿಬಿರ ನಡೆಯುವುದು. ಕೊನೆ ಗಳಿಗೆಯಲ್ಲಿ ತೊಂದರೆಯಾಗದಿರಲಿ ಎಂಬ ಕಾರಣಕ್ಕಾಗಿ ರೈಲಿನಲ್ಲಿ ಬೇಗ ಸ್ಥಳವನ್ನು ಕಾಯ್ದಿರಿಸಿಕೊಳ್ಳಲಿ. ಸ್ಥಳೀಯ ಸರ್ವೋದಯ ಮಿತ್ರ ಮಂಡಲಿಗಳು ತಮ್ಮ ಕ್ಷೇತ್ರದಿಂದ ಸಕ್ರಿಯವಾಗಿ ಸರ್ವೋದಯದ ಕೆಲಸಮಾಡಲು ಆಸಕ್ತಿ ಇರುವಂಥ ಮಹಿಳೆಯರನ್ನು ಶಿಬಿರಕ್ಕೆ ಕಳುಹಿಸಿ ಕೊಡಬೇಕಾಗಿ ವಿನಂತಿ. ಶಿಬಿರಕ್ಕೆ ಹೋಗುವ ಮಹಿಳೆಯರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಸುರೇಂದ್ರ ಕೌಲಗಿಯವರಿಗೆ ದೂರವಾಣಿ: ೯೧೪೧೭ ೦೦೮೧೨ ತಿಳಿಸಬೇಕಾಗಿ ವಿನಂತಿ.

***

ಗುರುಚರಣ್‌ಚಾಬ್ರಾ

ಮದ್ಯಪಾನ ನಿಷೇಧ ಸರ್ವೋದಯ ಆಂದೋಲನದ ಪ್ರಮುಖ ಕಾರ್ಯಕ್ರಮ. ೧೯೨೦ನೇ ಇಸವಿಯಿಂದಲೇ ದೇಶದಲ್ಲಿ ಮದ್ಯಪಾನ ನಿಷೇಧದ ವಿಚಾರ ನಡೆಯುತ್ತಲೇ ಇದೆ. ಆದರೆ ಸರ್ಕಾರಕ್ಕೆ ಬರುವ ಆದಾಯ ತಪ್ಪುತ್ತದೆಂಬ ಏಕೈಕ ಕಾರಣಕ್ಕಾಗಿ ರಾಷ್ಟ್ರಮಟ್ಟದಲ್ಲಾಗಲೀ, ರಾಜ್ಯಮಟ್ಟದಲ್ಲಾಗಲೀ ಕಳೆದ ೬೦ ವರ್ಷಗಳಿಂದ ಮದ್ಯಪಾನ ನಿಷೇಧ ಜಾರಿಗೆ ಬರಲೇ ಇಲ್ಲ. ಸಮಾಜದಲ್ಲಿ ಬೆಳೆಯುತ್ತಿರುವ ಕುಡುಕುತನ ಮತ್ತು ಮದ್ಯದ ಮಾರಾಟ ದೂರದೂರದ ಹಳ್ಳಿಗಳಲ್ಲಿಯೂ ಆಗುತ್ತಿರುವುದನ್ನು ವಿರೋಧಿಸಿ ಶ್ರದ್ಧಾವಾನ್ ಗಾಂಧೀವಾದಿಯಾಗಿದ್ದ ಗುರುಚರಣ್‌ಚಾಬ್ರಾ ೩೨ ದಿನಗಳ ದೀರ್ಘಕಾಲದ ಉಪವಾಸ ಮಾಡಿ ಮದ್ಯಪಾನ ನಿಷೇಧ ಆಗಬೇಕೆಂಬ ಕಾರಣಕ್ಕಾಗಿ ಅಮರರಾದರು. ದುಃಖದ ಸಂಗತಿಯೇನೆಂದರೆ ಪ್ರಜಾಸತ್ತಾತ್ಮಕ ಸರ್ಕಾರ ಇಂಥ ಅಹಿಂಸಾತ್ಮಕ ಪ್ರತಿಭಟನೆಗಳ ಬಗ್ಗೆ ಕಠಿಣ ಹೃದಯಿಯಾಗಿರುವುದು. ಸರ್ಕಾರ ಮನಸ್ಸು ಮಾಡಿದರೆ ಗುರುಚರಣ್‌ರ ಪ್ರಾಣವನ್ನು ಉಳಿಸಬಹುದಿತ್ತು. ಅವರಿಗೆ ಜನಪದ ವಿಚಾರ ತನ್ನ ಹೃದಯ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.

***

ನೇತ್ರ ಚಿಕಿತ್ಸಾ ಶಿಬಿರ

ಚಿತ್ರದುರ್ಗ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯವರು ಪ್ರತಿ ೩ ತಿಂಗಳಿಗೊಮ್ಮೆ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸುತ್ತಿದ್ದಾರೆ. ಡಿಸೆಂಬರ್ ೩, ೪ ಮತ್ತು ೫ನೇ ದಿನಾಂಕಗಳಲ್ಲಿ ಶಿಬಿರ ನಡೆಯಿತು. ಈ ನೇತ್ರ ಶಸ್ತ್ರ ಚಿತಿತ್ಸಾ ಶಿಬಿರ ನಡೆಯಲು ಸರ್ವೋದಯ ಮಿತ್ರ ಮಂಡಲಿಯ ಅಧ್ಯಕ್ಷರಾದ ಡಿ.ಎಲ್.ಭೀಮಾರೆಡ್ಡಿಯವರು ಮುಖ್ಯವಾಗಿ ಕಾರಣರಾಗಿದ್ದಾರೆ. ಪದಾಧಿಕಾರಿಗಳು ಕೈಜೋಡಿಸಿದ್ದಾರೆ. ನೇತ್ರ ಶಿಬಿರದ ಕಾರ್ಯಕ್ರಮದೊಂದಿಗೆ ಶಾಲಾ ಕಾಲೇಜುಗಳಲ್ಲಿ ಸರ್ವೋದಯ ವಿಚಾರದ ಪ್ರಚಾರದ ಕೆಲಸವನ್ನು ಮಾಡುತ್ತಾರೆ. ಇದೊಂದು ಒಳ್ಳೆಯ ರಚನಾತ್ಮಕ ಕಾರ್ಯಕ್ರಮವಾಗಿದೆ. ಬೇರೆ ಜಿಲ್ಲಾ ಸರ್ವೋದಯ ಮಿತ್ರ ಮಂಡಳಿಗಳೂ ಸಹ ಅಗತ್ಯವೆನಿಸುವ ಇಂಥ ರಚನಾತ್ಮಕ ಕಾರ್ಯಗಳನ್ನು ಮಾಡಬಹುದಾಗಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ.ಕೆ.ಸುಬ್ಬರಾವ್ – ಹೆಗ್ಗೋಡು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ.ಪಿ.ಉಮೇಶ್, ಶ್ರೀಮತಿ.ಎನ್.ಜೆ.ಶಶಿಕಲಾ – ಚಾಮರಾಜನಗರ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



ಶ್ರೀಮತಿ/ ಶ್ರೀ......

275
ಶ್ರೀ.ಕೆ.ಪಿ.ಸುರೇಶ್
#22, 1ನೇ ಫ್ಲೋರ್,
1ನೇ ಕ್ರಾಸ್
ಅಂಜನಾದ್ರಿ ಬಡಾವಣೆ
ಕೋಣನಕುಂಟೆ,
ಬೆಂಗಳೂರು
– 560061

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431 Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237